10

# ಕಿರಿಯ ಕುಳ್ಳ ಪಾಪಿ

## (ಲೂಕ 19:1-10)

ಸತ್ಯವೇದದ ಅನೇಕ ಪಾತ್ರಗಳು ಹೆಚ್ಚಾಗಿ ಅಪರಿಚಿತವಾಗಿ ಉಳಿದಿರುವವು. ಆದರೆ ಒಬ್ಬ ಚಿಕ್ಕ ವ್ಯಕ್ತಿ - ಅವನು ಹೊಸ ಒಡಂಬಡಿಕೆಯಲ್ಲಿ ಒಂದು ಚಿಕ್ಕ ದೃಶ್ಯದಲ್ಲಿ ಕಾಣಿಸಿಕೊಂಡರೂ ಅವನ ಬಗ್ಗೆ ಚಿಕ್ಕ ಮಕ್ಕಳೂ ಸಹ ತಿಳಿದಿರುವರು: ಅವನು ಜಕ್ಕಾಯನು.[1] ಬೈಬಲ್ ಕ್ಲಾಸುಗಳಲ್ಲಿ ಚಿಕ್ಕ ಮಕ್ಕಳು ಈ ಹಾಡನ್ನು ಹಾಡುವರು:[2]

> ಜಕ್ಕಾಯನು ಒಬ್ಬ ಕಿರಿಯ  ಕುಳ್ಳ ಮನುಷ್ಯ ಆಗಿದ್ದನು
> ಅವನು ಕಿರಿಯ ಕುಳ್ಳ ಮನುಷ್ಯ;
> ಏರಿದನು ಸಿಕಾಮೋ ಮರವನ್ನು (ಆಲದ ಮರ),
> ತಾನು ನೋಡಲು ಬಯಸಿದ ಕರ್ತನನ್ನು ನೋಡಲು.
> ಬರುತಿರಲು ರಕ್ಷಕನು ಆ ಹಾದಿಯಲಿ,
> ನೋಡಿದನಾತನು ಮರದಲಿ,
> ಮೇಲೆ ಹೇಳಿದನು ಅವನಿಗೆ, "ಕೆಳಗಿಳಿದು ಬಾ ಜಕ್ಕಾಯನೇ,
> ಹೋಗುತಿರುವೆನು ಇಂದು ನಿನ್ನ ಮನೆಗೆ,
> ಹೋಗುತ್ತಿರುವೆನು ಇಂದು ನಿನ್ನ ಮನೆಗೆ!"[3]

ನಮ್ಮಲ್ಲಿ ಅನೇಕರು ಎಂಟು ವರ್ಷ ಪ್ರಾಯದವರಾಗುವಾಗ ಜಕ್ಕಾಯನ ಬಗ್ಗೆ ಅಧ್ಯಯನ ಮಾಡುವದನ್ನು ಬಿಟ್ಟು ಬಿಡವುದು ನಿರ್ಭಾಗ್ಯಕರವಾದದ್ದು. ಜಕ್ಕಾಯನ ಕಥೆಯು ಸುಂದರವಾದ ಹಾಗೂ ಬಲವುಳ್ಳ ಪಾಠಗಳನ್ನು ಒಳಗೊಂಡಿರುವುದು. ಉದಾಹರಣೆಯಾಗಿ ಕೆಲವರು ಕೂಡಲೇ, "ಮನುಷ್ಯಕುಮಾರನು ಕೆಟ್ಟು ಹೋಗಿ ರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" ಎಂಬ ವಚನವನ್ನು ಗುರುತಿಸುವರು (ಲೂಕ 19:10). ಆ ಮಹಾ ವಾಕ್ಯವನ್ನು ಯಾವ ಘಟನೆಯು ತಂದಿತು ಎಂಬುದನ್ನು ನೀವೆಂದಾದರೂ ಯೋಚಿಸಿರುವಿರೋ? ಆ ಘಟನೆ ಜಕ್ಕಾಯನ ಕಥೆಯಾಗಿದೆ.

ಕೆಲವು ಕ್ಷಣ ಲೂಕ 19ನ್ನು ನೋಡೋಣ ಮತ್ತು "ಕಿರಿಯ ಕುಳ್ಳ ಪಾಪಿಯ," ಈ "ಕಿರಿಯ ಚಿಕ್ಕ ಮನುಷ್ಯನ" ಕಥೆಯ ಅಧ್ಯಯನ ಮಾಡೋಣ.

### ಐಶ್ವರ್ಯದ ಮೇಲೆ ಒಂದು ಚಿಕ್ಕ ಪಾಠ

### (ಲೂಕ 19:1, 2)

"ಆತನು ಯೆರಿಕೋ ಊರನ್ನು ಹೊಕ್ಕು ದಾಟಿ ಹೋಗುತ್ತಿದ್ದನು" (ವ. 1) ಎಂದು ಅಧ್ಯಾಯ ಪ್ರಾರಂಭವಾಗುತ್ತದೆ. ಯೇಸು ಯೆರೂಸಲೇಮಿಗೆ ತನ್ನ ಮಾರ್ಗದಲ್ಲಿದ್ದನು. ತಿಂಗಳುಗಳ ವರೆಗೆ "ಯೆರೂಸಲೇಮಿನ ಕಡೆಗೆ ಮುಖ ಮಾಡಿಕೊಂಡು" ಪ್ರಯಾಣ ಮಾಡುತ್ತಿದ್ದನು. ಈಗ ಆತನು ನಿಜವಾಗಿಯೂ ಅಲ್ಲಿಗೆ ಹೋಗುತ್ತಿರುವನು. ಆತನು ಬಹಳ ಸಮೀಪದಲ್ಲಿದ್ದನು. ಯೆರಿಕೋ ಯೆರೂಸಲೇಮಿನಿಂದ ಹದಿನೇಳು ಮೈಲು ದೂರದಲ್ಲಿತ್ತು.

ಅದು ವಿಶೇಷ ಘಟನೆಗಳುಳ್ಳ ಪ್ರಯಾಣವಾಗಿತ್ತು. ಆತನು ಯೆರೂಸಲೇಮಿನ ಸಮೀಪಕ್ಕೆ ಬಂದಂತೆ ಜನಸಮೂಹ ಇನ್ನೂ ದೊಡ್ಡದಾಗಿ ಬೆಳೆಯಿತ್ತು. ಒಂದು ಗಮನಾರ್ಹವಾದ ಘಟನೆ ಆಗಲೇ ಯೆರಿಕೋವಿನಲ್ಲಿ ನಡೆದಿತ್ತು. ಕುರುಡ ಬರ್ತಿಮೆ ಯನನ್ನು ಗುಣಪಡಿಸಿದ್ದು (ಲೂಕ 18ರ ಅಂತ್ಯದಲ್ಲಿ ದಾಖಲೆಯಾಗಿದೆ). ಈಗ ಯೇಸು ಕಿರಿಯ ಕುಳ್ಳ ಪಾಪಿಯನ್ನು ಸಂದರ್ಶಿಸುತ್ತಾನೆ.

ಯೆರಿಕೋ ಅತೀ ಪುರಾತನ ಪಟ್ಟಣಗಳಲ್ಲಿ ಒಂದಾಗಿದೆ. ಇತಿಹಾಸದ ಮುಂಚಿನ ಸಮಯಕ್ಕೆ ಹಿಂದೆ ಹೋಗುತ್ತದೆ.[4] ಇಂದು ನೀವು ಆ ಪಟ್ಟಣವನ್ನು ಸಂದರ್ಶಿಸುವದಾದರೆ ಒಂದರ ಮೇಲೆ ಒಂದು ಪುರಾತನ ಪಟ್ಟಣಗಳು ಕಟ್ಟಲ್ಪಟ್ಟ ಪದರುಗಳ ನಂತರ ಪದರುಗಳು ಇರುವ ವಿಶಾಲವಾದ ದಿಬ್ಬಗಳು ತೋರಿಸಲ್ಪಡುತ್ತವೆ.[5]

ಯೇಸು ಆ ಪಟ್ಟಣವನ್ನು ಸಂದರ್ಶಿಸಿದಾಗ ಅಲ್ಲಿಯ ಜನಸಂಖ್ಯೆ ಸುಮಾರು 100,000. ಯೆರಿಕೋ ಸುಂದರವಾದ ಪಟ್ಟಣ. ಖರ್ಜೂರ ಮರಗಳಿಗೂ[6] ಗುಲಾಬಿ ತೋಟಗಳಿಗೂ ಪ್ರಸಿದ್ಧವಾಗಿತ್ತು. ಘನವಂತ ಹೆರೋದನೂ ಅವನ ಮಗ ಅರ್ಖೆಲಾ ಯನೂ ಯೆರಿಕೋವನ್ನು ಇನ್ನೂ ಸುಂದರವಾಗಿ ಮಾಡಿದರು; ಸುಂದರವಾದ ಬಿಳಿ ಅರಮನೆಯನ್ನು, ಒಂದು ನಾಟಕ ಗೃಹವನ್ನು, ಒಂದು ಸರ್ಕಸ್ಸಿನ ರಂಗ ಸ್ಥಳವನ್ನು ಕಟ್ಟಿಸಿದರು.[7] ಕೆಲವು ಬೀದಿಗಳಲ್ಲಿ ಸಾಲಾಗಿ ಬೈಬಲ್‌ನಲ್ಲಿ ಸಿಕಾಮೋರ ಟ್ರೀಜ[8] ಎಂದು ಕರೆಯಲ್ಪಡುವ ಮರಗಳಿದ್ದವು.[9] ಕಾಡು ಅಂಜೂರ ಹಣ್ಣುಗಳ ಮರಗಳೂ ಅದರಂತಿದ್ದ ಬೇರೆ ಮರಗಳೂ ಇದ್ದವು. ಅವು ಮೂವತ್ತು, ನಲ್ವತ್ತು ಅಡಿ ಎತ್ತರ ಬೆಳೆಯುತ್ತಿದ್ದವು. ಅವುಗಳಿಗೆ ಚಿಕ್ಕ ಬೊಡ್ಡೆಗಳಿದ್ದು ಟೊಂಗೆಗಳು ನೆಲದ ಕಡೆಗೆ ಬಾಗಿರುತ್ತಿದ್ದವು. ದಣಿದ ಪ್ರಯಾಣಿಕರಿಗೆ ಅವು ನೆರಳು ಕೊಡುತ್ತಿದ್ದವು.

ಯೆರಿಕೋವಿಗೆ ಅನೇಕ ಐಶ್ವರ್ಯಗಳಿದ್ದವು. ಐಶ್ವರ್ಯಗಳ ಒಂದು ಮೂಲವು ಅಲ್ಲಿದ್ದ ಒಕ್ಕಲುತನ, ಅನೇಕ ತಾಳೆ ಮರಗಳು, ಖರ್ಜೂರದ ಮರಗಳು ಇದ್ದವು. ಅವುಗಳ ಹಣ್ಣುಗಳು ಜಗತ್ತಿನಲ್ಲೆಲ್ಲಾ ಮಾರಾಟವಾಗುತ್ತಿದ್ದವು. ಮೈಲುಗಳ ವರೆಗೆ ಸುಗಂಧ ಬೀರುವ ಯೆರಿಕೋವಿನ ತೈಲ ಮರಗಳು ಜಗತ್ತು ಪ್ರಸಿದ್ಧವಾಗಿದ್ದವು. ಈ ತೈಲಮರಗಳಿಂದ ತೆಗೆಯುವಂಥ ಎಣ್ಣೆಯು ಸುಗಂಧವನ್ನೂ ನುಣುಪನ್ನೂ ಕೊಡುತ್ತ ವಾಸಿ ಮಾಡುವ ಗುಣಗಳಿಗೆ ಪ್ರಸಿದ್ಧವಾಗಿತ್ತು.

ಯೆರಿಕೋ ಪಟ್ಟಣವು ಐಶ್ವರ್ಯವುಳ್ಳದ್ದಾಗಿರುವದಕ್ಕೆ ಇನ್ನೊಂದು ಕಾರಣವು ಅದರ ಸ್ಥಳ. ಯೆರಿಕೋ ಪಟ್ಟಣವು ವಿಶಾಲವಾದ ವ್ಯಾಪಾರದ ಮಾರ್ಗಗಳ ಕೇಂದ್ರ ವಾಗಿತ್ತು. ಯೋರ್ದನ್ ಕಣಿವೆಯಲ್ಲಿ ಇದ್ದು ಯೆರಿಕೋ ಪಟ್ಟಣವು ಯೆರೂಸಲೇಮಿಗೆ ಹೋಗುವದನ್ನು ಯೋರ್ದನಿನ ಪೂರ್ವ ಪ್ರದೇಶಗಳಿಗೆ ನದಿಯನ್ನು ದಾಟುವದಕ್ಕೂ ಮಾರ್ಗಗಳನ್ನು ಒದಗಿಸಿತ್ತು. ಯೆರಿಕೋವಿಗೆ ಉತ್ತರದಲ್ಲಿ ದಮಸ್ಕ, ತೂರ ಹಾಗೂ ಸಿದೋನಗಳೊಂದಿಗೆ, ಪಶ್ಚಿಮಕ್ಕೆ ಕೈಸರಯ ಮತ್ತು ಯೊಪ್ಪೆದೊಂದಿಗೆ, ದಕ್ಷಣಕ್ಕೆ ಐಗುಪ್ತದೊಂದಿಗೆ ವ್ಯಾಪಾರ ಸಂಬಂಧ ಹೊಂದಿಕೊಂಡಿತ್ತು. ಯೆರಿಕೋವಿನ ಮೂಲಕ ಹೋಗುವ ಎಲ್ಲಾ ಸರಕುಗಳಿಗೆ ತೆರಿಗೆ ವಿಧಿಸಲಾಗುತ್ತಿತ್ತು (ಈ ವಿಷಯವನ್ನು ನಿಮ್ಮ ಮನಸ್ಸಿನಲ್ಲಿಟ್ಟು ಕೊಳ್ಳಿರಿ).

ಬಹಶಃ ಬೇಗನೇ ಯೆರಿಕೋ ದಾಟಿ ಯೆರೂಸಲೇಮಿಗೆ ಪ್ರಯಾಣ ಮುಂದು ವರಿಸುವುದು ಯೇಸುವಿನ ಯೇಜನೆಯಾಗಿತ್ತು. ಹಾಗಿದ್ದರೆ, ಆತನ ಯೋಜನೆಯನ್ನು ಬದಲಾಯಿಸಲು ಕಾರಣವಾಗಿ ಸಂಗತಿಯೊಂದು ಸಂಭವಿಸಲಿಕ್ಕಿತ್ತು.

"ಅಲ್ಲಿ ಜಕ್ಕಾಯನೆಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು" (ವ. 2ಎ). "ಜಕ್ಕಾಯ" ಎಂಬುದು ಹೀಬ್ರೂ ಹೆಸರು. "ಶುದ್ಧ" ಇಲ್ಲವೇ "ನೀತಿವಂತ" ಎಂದರ್ಥ. ತನ್ನ ಚಿಕ್ಕ

ಬಾಲಕನಿಗಾಗಿ ಅವನ ತಾಯಿಗಿದ್ದ ನಿರೀಕ್ಷೆಯನ್ನು ಹೆಸರು ಪ್ರತಿಬಿಂಬಿಸುತ್ತದೆ. ಆದರೆ ಜಕ್ಕಾಯನು ಯೆರಿಕೋವಿನ ನಾಗರಿಕರಿಂದ ಶುದ್ಧನೆಂದಾಗಲೀ, ನೀತಿವಂತ ನೆಂದಾಗಲೀ ನೋಡಲ್ಪಡಲಿಲ್ಲ. ನಮ್ಮ ಪಾಠದಲ್ಲಿ ಕಾರಣವು ಕೊಡಲ್ಪಟ್ಟಿದೆ. "... ಅವನು ಸುಂಕದ ಗುತ್ತಿಗೆ ದಾರನು"[10] (ವ. 2ಬಿ). ಸುಂಕವಸೂಲು ಮಾಡುವವರು ಈಗಿನಂತೆ ಆಗಲೂ ಬಹಳ ಪ್ರಸಿದ್ಧರಾಗಿರಲಿಲ್ಲ. "ನನ್ನ ಮಗನು ಸುಂಕವಸೂಲು ಮಾಡುವನಾಗಿ ಬೆಳೆಯ ಬೇಕೆಂಬುದು ನನ್ನ ಕನಸಾಗಿದೆ" ಎಂದು ಹೇಳುವ ತಂದೆ ತಾಯಿಗಳನ್ನು ನಾನೆಂದೂ ತಿಳಿದಿರುವದಿಲ್ಲ. "ನಾನು ದೊಡ್ಡವನಾದಾಗ, ನಾನೊಬ್ಬ ದೊಡ್ಡ ಸುಂಕವಸೂಲಿಗಾರ ನಾಗುವೆನೆಂದು" ಹೇಳಿದ ಮಗನನ್ನು ಎಂದೂ ನೋಡಿಲ್ಲ.

ಅನೇಕ ವರ್ಷಗಳ ವರೆಗೆ ಇಂಟರ್ನಲ್ ರೆವೆನ್ಯೂ ಸರ್ವೀಸದಲ್ಲಿ ಕೆಲಸಮಾಡಿದ ಒಬ್ಬ ಸ್ನೇಹಿತ ನನಗಿದ್ದಾನೆ. ಆಗಾಗ ಅವನು ತನ್ನ ಕೆಲಸದ ವಿವರಗಳನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದನು. ಕೆಲವು ಸಮಯ ಅದರಲ್ಲಿ ಅವನು ರಹಸ್ಯವಾಗಿ ಕೆಲಸ ಮಾಡಿದನು. ಅವರು ಸಾಕಷ್ಟು ತೆರಿಗೆ ಕೊಡುತ್ತಿರುವರೋ ಎಂಬುದನ್ನು ನೋಡುವ ಗುಪ್ತಾಚಾರ ಕೆಲಸವನ್ನು ಅವನು ದ್ವೇಷಿಸಿದನು. ಅವನಿಗೆ ಸಾಧ್ಯವಾದ ಕೂಡಲೇ ಆ ಸೇವೆಯಿಂದ ನಿವೃತ್ತನಾದನು.

ಕ್ರಿಸ್ತನ ಕಾಲಕ್ಕಿಂತ ಈಗಿನ ಕಾಲದಲ್ಲಿ ತೆರಿಗೆ ವಸೂಲು ಮಾಡುವ ಕೆಲಸವು ಹೆಚ್ಚು ಗೌರವವುಳ್ಳದ್ದಾಗಿದೆ. ಪಲೆಸ್ತೀನದಲ್ಲಿ ಸುಂಕ ವಸೂಲು ಮಾಡುವವರು ಯೆಹೂದ್ಯರಾಗಿದ್ದು ರೋಮನ್ ಸರಕಾರಕ್ಕಾಗಿ ಕೆಲಸ ಮಾಡುತ್ತಿದ್ದರು. ತಮ್ಮ ದೇಶ ವನ್ನು ವಶಪಡಿಸಿಕೊಂಡು ತಮ್ಮನ್ನು ತಮ್ಮ ಅಧೀನತೆಯಲ್ಲಿಟ್ಟುಕೊಂಡು ದೇಶಕ್ಕಾಗಿ ಅವರು ತಮ್ಮ ಸ್ವಂತ ಜನರಿಂದ ತೆರಿಗೆ ಕೂಡಿಸುತ್ತಿದ್ದರು. ಸುಂಕದವರು ಹೆಚ್ಚಾಗಿ ಅಪ್ರಾಮಾಣಿಕರಾಗಿರುತ್ತಿದ್ದರು. ಸುಂಕವಸೂಲು ಮಾಡುವವರಾಗಲು ರೋಮನ್ ಸರಕಾರದಿಂದ ರಿಯಾಯಿತಿ ಪಡೆಯಬೇಕಾಗಿತ್ತು. (ಹೆಚ್ಚಾದ ಸಮಯಗಳಲ್ಲಿ ಭಾರವಾದ ಲಂಚವು ಒಳಗೊಳ್ಳಲ್ಪಡುತ್ತಿತ್ತು). ಆಗ ರೋಮನ್ನರು ಅವನಿಗೆ ಪ್ರತೀ ವರ್ಷ ಎಷ್ಟು ಕೂಡಿಸುವ ನಿರೀಕ್ಷೆಯಿರ ಬೇಕೆಂದು ಹೇಳುತ್ತಿದ್ದರು; ಕೆಲವು ಸಲ ಅದು ಮುಂಚಿತವಾಗಿಯೇ ಕೊಡಲ್ಪಡಬೇಕಾಗುತ್ತಿತ್ತು. ಅವನು ತಾನು ರೋಮನ್ ಸರಕಾರಕ್ಕೆ ಕೊಡಬೇಕಾಗಿದ್ದುದಕ್ಕಿಂತಲೂ ಹೆಚ್ಚು ವಸೂಲು ಮಾಡುವದರಿಂದ ತನ್ನ ಲಾಭ ಮಾಡಿ ಕೊಳ್ಳುತ್ತಿದ್ದನು. ಅನೇಕ ಸುಂಕದವರು ತಮಗೆ ಸಾಧ್ಯವಾದಷ್ಟು ಹೆಚ್ಚಾದ ದ್ದನ್ನು ನೇಮಿಸುತ್ತಿದ್ದರು.[11] ಅತಿಯಾಶೆ, ಅಪ್ರಮಾಣಿಕತೆ ಮತ್ತು ಲಂಚಗುಳಿತನಕ್ಕೆ ಪಕ್ಷ ವಾದ ಪದ್ಧತಿಯಾಗಿತ್ತು.

ಇದರ ಪರಿಣಾಮವಾಗಿ ಇತರ ಯೆಹೂದ್ಯರು ಸುಂಕವಸೂಲು ಮಾಡುವವರನ್ನು ದೇಶ ದ್ರೋಹಿಗಳು, ಸ್ವಾರ್ಥಿಗಳು, ಅಬ್ರಹಾಮನ ನಿಜವಾದ ಮಕ್ಕಳಾಗಿ ಉಳಿಯದವರು ಎಂದು ತಿಳಿಯುತ್ತಿದ್ದರು. ಸುಂಕದವನಿಗೆ ಮತ ಚಲಾಯಿಸುವ, ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಹಕ್ಕು ಇರಲಿಲ್ಲ. ಸಭಾಮಂದಿರದೊಳಗೆ ಹೋಗಲು ಅಪ್ಪಣೆಯಿರಲಿಲ್ಲ. ಯೆಹೂದ್ಯರು ಮೂರು ಜನರಿಗೆ ಅಂದರೆ ಕಳ್ಳನಿಗೆ, ದರೋಡೆ ಖೋರನಿಗೆ ಮತ್ತು ಸುಂಕವಸೂಲು ಮಾಡುವವರಿಗೆ ಸುಳ್ಳು ಹೇಳಬಹುದೆಂದು ಟ್ಯಾಲ್ಮಡ್ ಹೇಳಿತು.[12] ಪರಿಶುದ್ಧ ಬರಹಗಳಲ್ಲಿ ಸುಂಕವಸೂಲು ಮಾಡುವವರು ವ್ಯತ್ಯಾಸವಿಲ್ಲದೇ ಅನಪೇಕ್ಷಿತ ಜನರೊಂದಿಗೆ ಕೂಡಿಸಲ್ಪಟ್ಟಿದ್ದರು: "ಸುಂಕದವರು ಪಾಪಿಗಳು" (ಮತ್ತಾಯ 9:10[13]); "ಅನ್ಯನಂತೆಯೂ ಸುಂಕದವನಂತೆಯು" (ಮತ್ತಾಯ 18:17), "ಸುಂಕದವರು ಸೂಳೆಯರು" (ಮತ್ತಾಯ 21:31, 32). "ಸುಲುಕೊಳ್ಳುವವರೂ ಅನ್ಯಾಯಗಾರರೂ

ಹಾದರ ಮಾಡುವವರೂ ... ಈ ಸುಂಕದವನಂತೆಯೂ" (ಲೂಕ 18:11).

ಜಕ್ಕಾಯನು ಕೇವಲ ಸುಂಕವಸೂಲು ಮಾಡುವವನಷ್ಟೇ ಆಗಿರಲಿಲ್ಲ, ಅವನು "ಸುಂಕದ ಗುತ್ತಿಗೆದಾರನೂ ಆಗಿದ್ದನು." ಈ ಮಾತುಗಳನ್ನು "ಕಮಿಷನರ್ ಆಫ್ ಟ್ಯಾಕ್ಸಸ್" ಎಂದು ಬಾರ್ಕ್ಲೇ ಅವರು ಭಾಷಾಂತರಿಸಿದ್ದಾರೆ. ಇಡೀ ಕ್ಷೇತ್ರದ ಗುತ್ತಿಗೆಯನ್ನು ಜಕ್ಕಾಯನು ಕೊಂಡುಕೊಂಡಿದ್ದನು. ಪಾಲೆಸ್ತೀನ ದೇಶದಲ್ಲಿ ಮೂರು ಟ್ಯಾಕ್ಸ ಕೇಂದ್ರ ಗಳಿದ್ದವು: ಕೈಸರಯ, ಕಪೆರ್ನೌಮ ಹಾಗೂ ಯೆರಿಕೋ. ಜಕ್ಕಾಯನಿಗೆ ದೇಶದ ಮೂರನೆಯ ಭಾಗಕ್ಕೆ ಸಂಪರ್ಕವಿತ್ತು. ಹಾಗಿದ್ದರೆ ಪಾಲೆಸ್ತೀನದ ಆ ವಿಭಾಗದಲ್ಲೆಲ್ಲಾ ಸುಂಕವಸೂಲು ಮಾಡುವವರು ಅವನಿಗಾಗಿ ಕೆಲಸ ಮಾಡುತ್ತಿದ್ದರು. ಪ್ರತಿಯೊಬ್ಬ ಸುಂಕದವನಿಂದ ಆದಾಯದ ಕೆಲಭಾಗವನ್ನು ಜಕ್ಕಾಯನು ಪಡಕೊಂಡಿರ ಬಹುದು. ಆ ಕ್ಷೇತ್ರದಲ್ಲಿಯ ಯೆಹೂದ್ಯರಿಗೆ ಜಕ್ಕಾಯನು ಸ್ಥಳಿಕ ಮಾಫಿಯಾದ ಮುಖ್ಯಸ್ಥನೂ, ಯೆಹೂದಿಯರ ಗಾಡ್ ಫಾದರ ಆಗಿದ್ದನು.[14]

ಜಕ್ಕಾಯನ ವ್ಯವಹಾರದ ವಿಸ್ತರಣೆಯನ್ನು ಯೋಚಿಸಿ, ಮುಂದಿನ ಮಾತನ್ನು, ಅಂದರೆ "ಅವನು ಐಶ್ವರ್ಯವಂತನು" (ವ. 2ಸಿ)[15] ಎಂಬುದನ್ನು ಓದಲು ಆಶ್ಚರ್ಯವಾ ಗುವದಿಲ್ಲ. ವ್ಯಾಪಾರದ ಮಾರ್ಗಗಳ ಮೇಲೆ ಯೆರಿಕೋವಿನ ಪ್ರಮುಖ ಸ್ಥಾನವನ್ನು ನಾವು ಆಗಲೇ ಗಮನಿಸಿದ್ದೇವೆ. ಸುಂಕವಸೂಲು ಮಾಡುವವರಿಗೆ ಅದು ಲಾಭದಾಯಕವಾದ ಸ್ಥಳವಾಗಿತ್ತು. ಜಕ್ಕಾಯನು ಅದರ ಪೂರ್ಣಲಾಭ ಪಡೆದು ಕೊಂಡಿರಬೇಕು.

ಅವನ ಐಶ್ವರ್ಯವು ಅವನನ್ನು ಸಂತೋಷವುಳ್ಳವನನ್ನಾಗಿ ಮಾಡಿತೋ? ಅವನಿಗೆ ಐಶ್ವರ್ಯವಿದ್ದರೂ ಸಂತೋಷವಿರಲಿಲ್ಲ ಎಂದು ಹೇಳುವಲ್ಲಿ ಅತಿರೇಕವಿಲ್ಲವೆಂದು ತಿಳಿಯುತ್ತೇನೆ. ಯೆರಿಕೋವಿನಲ್ಲಿ ಅವನು ಬಹಳವಾಗಿ ದ್ವೇಷಿಸಲ್ಪಟ್ಟಿದ್ದನು. ಅವನೊಂದಿಗೆ ಯೇಸುವು ಹೋದಾಗ, "ಈತನು ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳು ವದಕ್ಕೆ ಹೋಗಿದ್ದಾನೆ" ಎಂದು ಗುಣುಗುಟ್ಟಿದರು (ವ. 7) ಎಂದಿದೆ. ಪಟ್ಟಣದಲ್ಲಿ ನೀವು ಅತಿಯಾಗಿ ತಿರಸ್ಕರಿಸಲ್ಪಟ್ಟ - ಸಂಪೂರ್ಣವಾಗಿ ಬಹಿಷ್ಕೃತನಾದ ವ್ಯಕ್ತಿಯಾಗಿರುವದನ್ನು ಹೇಗೆ ಮೆಚ್ಚಿಕೊಳ್ಳುವಿರಿ? ಇದು ನಿಮ್ಮ ಹೆಂಡತಿಗೆ, ನಿಮ್ಮ ಮಕ್ಕಳಿಗೆ ಇದೇನು ಮಾಡುವುದು ಎಂಬುದನ್ನು ಕಲ್ಪಿಸಿಕೊಳ್ಳಿರಿ.

ಈ ರೀತಿಯಲ್ಲಿರುವುದು ಏನೆಂದು ನನಗೆ ತಿಳಿದಿರುವದಿಲ್ಲ. ಆದರೆ ಹೊರಗಿ ರುವಂಥದ್ದು ತಮಾಷೆಯಾಗಿರುವದಿಲ್ಲವೆಂದು ತಿಳಿದಿದ್ದೇನೆ. ಜಕ್ಕಾಯನ ಪ್ರಸಿದ್ಧಿಯ ಕೊರತೆಯ ಬಗ್ಗೆ ನಾನು ಯೋಚಿಸಿದಾಗ, ನನ್ನ ಬಾಲ್ಯ ಪ್ರಾಯದ ಒಂದು ಘಟನೆ ನನ್ನ ಮನಸ್ಸಿನಲ್ಲಿ ಬರುತ್ತದೆ. ಬೇಸಬಾಲ್ ಆಟ ಆಡಲು ನಮ್ಮಲ್ಲಿ ಕೆಲವರು ಕೂಡಿ ಬಂದೆವು. ನಾನೆಂದೂ ಒಳ್ಳೆಯ ಬೇಸಬಾಲ್ ಆಟಗಾರನಾಗಿರಲಿಲ್ಲ (ನನ್ನ ಹಸ್ತ - ಕಣ್ಣುಗಳ ಹೊಂದಾಣಿಕೆ ಚೆನ್ನಾಗಿಲ್ಲವೆಂದು ಒಮ್ಮೆ ಕೋಚ್ ಹೇಳಿದ್ದರು). ಆದರೆ ಉಳಿದ ಬಾಲಕರೊಂದಿಗೆ ಇರಲು ಬಯಸಿದೆನು. "ಪಕ್ಷಗಳನ್ನು ಆಯ್ದು ಕೊಳ್ಳುವದರೊಂದಿಗೆ" ಆಟ ಪ್ರಾರಂಭವಾಯಿತು. ಎರಡೂ ಕಡೆಗಳಿಗೆ ಆಯ್ಕೆಯಾದ ಮೇಲೆ ಕೊನೆಗೆ ಒಬ್ಬ ಬಾಲಕ ಉಳಿದ: ಅದು ನಾನು. ಅಯ್ಕೆ ಮಾಡಬೇಕಾಗಿದ್ದ ದೊಡ್ಡ ಬಾಲಕ ನಿಟ್ಟು ಸಿರುಬಿಟ್ಟು, "ಆಗಲಿ, ನಾನು ರೋಪರನನ್ನು ತೆಗೆದುಕೊಳ್ಳುವೆನು" ಎಂದನು.[16]

ಯೋರ್ದನಿನಲ್ಲಿ ಪಕ್ಷಗಳ ಆಯ್ಕೆ ಮಾಡಿಕೊಂಡಿದ್ದರೆ, ಯಾರು ಜಕ್ಕಾಯನನ್ನು ಆರಿಸಿಕೊಳ್ಳುತ್ತಿರಲಿಲ್ಲ. ಯಾರ ಪಕ್ಷದಲ್ಲಿಯೂ ಆಡಲು ಅವನನ್ನು ಬಿಡುತ್ತಿರಲಿಲ್ಲ. ಅವನು ದ್ವೇಷಿಸಲ್ಪಟ್ಟನು, ತಿರಸ್ಕರಿಸಲ್ಪಟ್ಟನು. ಅವನು ದುಃಖವುಳ್ಳ ಮನುಷ್ಯನಾ ಗಿದ್ದನು.

ತಿಳಿದೋ ತಿಳಿಯದೆಯೋ ಜಕ್ಕಾಯನು ಯೇಸುವನ್ನು ಹುಡುಕುತ್ತಿದ್ದನು.

ಯಾಕಂದರೆ ತನ್ನ ಜೀವಿತವನ್ನು ಪರಿವರ್ತಿಸಿಕೊಳ್ಳಲು ಯೇಸುವಿನ ಸಹಾಯವನ್ನು ಬಯಸಿದನು. ಯೇಸುವು ಸುಂಕದವರ ಹಾಗೂ ಪಾಪಿಗಳ ಗೆಳೆಯ ಎಂಬುದನ್ನು ಬಹುಶಃ ಅವನು ಕೇಳಿದ್ದನು (ಮತ್ತಾಯ 11:19). ತನ್ನ ಒಬ್ಬ ಶಿಷ್ಯನಾಗಿರಲು ಯೇಸು ಸುಂಕದ ಮತ್ತಾಯನನ್ನು ಕರೆದ ವಿಷಯವನ್ನು ಅವನು ಕೇಳಿದ್ದಿರಬಹುದು (ಲೂಕ 5:27). ಬಹುಶಃ ಮತ್ತಾಯನು ಜಕ್ಕಾಯನ ಸ್ನೇಹಿತನಾಗಿದ್ದಿರಲೂ ಬಹುದು. ಯೇಸುವನ್ನು ಹುಡುಕುವದರಲ್ಲಿ ಜಕ್ಕಾಯನಿಗಿದ್ದ ನಿಶ್ಚಿತವಾದ ಉದ್ದೇಶವನ್ನು ನಾನು ಅರಿಯೆನು. ಆದರೆ ಅವನಿಗೆ ಸಹಾಯದ ಅವಶ್ಯಕತೆಯು ಇತ್ತೆಂದು ನಾನು ನಂಬುತ್ತೇನೆ.

ಐಶ್ವರ್ಯದ ಮೇಲಿನ ಈ ಚಿಕ್ಕ ಪಾಠವನ್ನು ಕೇಳಿರಿ: ಹಣ ಹಾಗೂ ವಸ್ತುಗಳು ಸಂತೋಷವನ್ನು ಕೊಂಡುಕೊಳ್ಳಲಾರವು. ಆಸ್ತಿಗಳು ಥಕ್ಕನೇ ಹೊರಟು ಹೋಗುವವು,[17] ವಸ್ತುಗಳು ಆದರಣೆ ಕೊಡಲಾರವು. ಆನಂದದಿಂದಿರಲು ಇತರರೊಂದಿಗೆ ನಮಗೆ ಸಂಬಂಧಗಳ ಅಗತ್ಯತೆಯಿದೆ. ವಿಶೇಷವಾಗಿ ನಮ್ಮ ದೇವರೊಂದಿಗೆ ಸರಿಯಾದ ಸಂಬಂಧದಲ್ಲಿ ಇರುವ ಅಗತ್ಯತೆಯಿದೆ.

## ಕರ್ತನನ್ನು ಹುಡುಕುವದರ ಮೇಲೆ ಒಂದು ಚಿಕ್ಕ ಪಾಠ (ಲೂಕ 19:3, 4)

"ಅವನು ಯೇಸು ಎಂಥವನೆಂದು ನೋಡಲಪೇಕ್ಷಿಸಿದನು" (ವ. 3ಎ). ಅಕ್ಷರಶಃವಾಗಿ, "ಅವನು ಯೇಸುವನ್ನು ಆತನು ಯಾರು ಎಂಬುದನ್ನು ಹುಡುಕುತ್ತಿದ್ದನು" ಎಂದಿದೆ. ಹೊಸ ಒಡಂಬಡಿಕೆಯಲ್ಲಿ "ಹುಡುಕು" ಎಂಬ ಪದ ರೂಪವು ಎಲ್ಲೆಲ್ಲಿ ಕಂಡುಬರುತ್ತದೋ ಅಲ್ಲಿ ಅದು ಯಾವಾಗಲೂ ಪರಿಶ್ರಮಿಶಲು ಪ್ರಯತ್ನವನ್ನು ಸೂಚಿಸುತ್ತದೆ;[18] ಅದು ಎಂದೂ ಅರ್ಧ ಹೃದಯದ ಪ್ರಯತ್ನವನ್ನು ಸೂಚಿಸುವದಿಲ್ಲ. ಯೇಸುವು ಯೆರಿಕೋದಲ್ಲಿ ಹಾದು ಹೋಗುತ್ತಿರುವನೆಂದು ಜಕ್ಕಾಯನು ಕೇಳಿದನು. ಅವನು ಆತನನ್ನು ನೋಡಲಿಕ್ಕೆ ನಿರ್ಧರಿಸಿದನು.

ಹೀಗಿರುವಾಗ ಅವನು ಪ್ರಯತ್ನಿಸಿದರೂ "ಜನರ ಗುಂಪಿನ ನಿಮಿತ್ತ ನೋಡಲಾರದೇ ಹೋದನು" (ವ. 3ಬಿ). ಯೆರೂಸಲೇಮಿಗೆ ಹಬ್ಬಕ್ಕಾಗಿ ಹೋಗುತ್ತಿದ್ದ ಯಾತ್ರಿಕರು ಯೇಸುವಿನ ಸುತ್ತ ಇದ್ದು ಅವರು ಆತನೊಂದಿಗೆ ಪ್ರಯಾಣ ಮಾಡುತ್ತಿದ್ದರು. ಅದರೊಂದಿಗೆ ಆಗಲೇ ಸುದ್ದಿ ಹಬ್ಬಿತ್ತು. ಜನರು ಯೆರಿಕೋವಿನ ಬೀದಿಗಳಲ್ಲಿ ಮೂರು ನಾಲ್ಕು ಸಾಲುಗಳಲ್ಲಿ ನಿಂತುಕೊಂಡಿದ್ದರು.

ವಚನದ ಕೊನೆಯಲ್ಲಿ ಜಕ್ಕಾಯನ ಸಮಸ್ಯೆಯು ಹೇಳಲ್ಪಟ್ಟಿದೆ. "... ಅವನು ಗಿಡ್ಡನಾಗಿದ್ದನು" (ವ. 3ಸಿ). "ಅವನು ಕುಳ್ಳನಾಗಿದ್ದನೆಂದು" ಸ್ಪಷ್ಟವಾಗಿ ಹೇಳಬಹುದು. ಅವನು ನೋಡಲಿಕ್ಕಾಗುವಂತೆ ಜನರ ಸಮೂಹದಲ್ಲಿ ನುಗ್ಗಲು ಪ್ರಯತ್ನಿಸಿದನು. ಅವನು ಯಾರೆಂದು ಜನರು ನೋಡಿದಾಗ, ದ್ವೇಷಿಸಲ್ಪಟ್ಟ ಸುಂಕದವನನ್ನು ಹಿಂದೆ ಸರಿಸುವುದು ಅವರದಾಗಿತ್ತು. ಅವನನ್ನು ದೂಡಿದರು, ಪಕ್ಕಕ್ಕೆ ತಳ್ಳಿದರು. ಅವನ ಪಾದಗಳ ಮೇಲೆ ಕಾಲಿಟ್ಟರು.[19] ಆ ಮೇಲೆ ಅವನು ಜನರ ಹಿಂದೆ ನಿಂತುಕೊಂಡನು. ಮೇಲೆ ಕೆಳಗೆ ಜಿಗಿಯುತ್ತ ಜನಸಮೂಹದ ಮೇಲಿಂದ ನೋಡಲು ಪ್ರಯತ್ನಿಸಿದನು. ಆದರೆ ಸಾಧ್ಯವಾಗಲಿಲ್ಲ. ಅವನು ಗಿಡ್ಡನಾಗಿದ್ದದರಿಂದ ಯೇಸುವನ್ನು ನೋಡುವುದು ಅಸಾಧ್ಯವಾಗಿತ್ತು.

"ಗಿಡ್ಡರಾಗಿರುವ ಜನರ ಬಗ್ಗೆ" ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಜಕ್ಕಾಯನು ಕುಳ್ಳನಾಗಿದ್ದರಿಂದ ಯೆರಿಕೋವಿನಲ್ಲಿದ್ದವರು ಅವನ ಬಗ್ಗೆ ತಿರಸ್ಕಾರದ,

ಹಾಸ್ಯದ ಮಾತುಗಳನ್ನು, ಅಸಹ್ಯವಾದ ಹಾಡುಗಳನ್ನು ರಚಿಸಿರಬೇಕು. "ಕುಳ್ಳನ ಬಗ್ಗೆ ಹಾಡುವೆವು" ಎಂಬುದರಿಂದ ಅವನನ್ನು ಅವಮಾನ ಪಡಿಸಿರಬೇಕು. ಯೆರಿಕೋವಿನ ಚಿಕ್ಕಮಕ್ಕಳು ಅವನನ್ನು ನೋಡಿದಾಗ ಅವನ ಬಗ್ಗೆ ಕುಚೋದ್ಯದ ಹಾಡುಗಳನ್ನು ಹಾಡಿರ ಬೇಕೆಂದು ನಾನು ಕಲ್ಪಿಸುತ್ತೇನೆ.[20] ಗಿಡ್ಡರಾಗಿರುವ ಜನರ ಬಗ್ಗೆ ಕೀಟಲೆ ಮಾಡುವುದು ಬಂದಾಗ ನಾನು ಅದನ್ನು ಸಹಿಸುವದಿಲ್ಲ.[21] ನನಗೆ ಪರಿಚಯವಿರುವ ಹೆಚ್ಚಾದ "ಗಿಡ್ಡ ಮನುಷ್ಯರು" ಬಹಳ ವಿಶೇಷವಾದ ಜನರಾಗಿದ್ದಾರೆ. ಹೆಚ್ಚಾದವರು ಪ್ರೇರೇಪಿಸಲ್ಪಟ್ಟು ಉನ್ನತ ಸಾಧನೆ ಮಾಡಿದ್ದಾರೆ. ಐತಿಹಾಸಿಕವಾಗಿ, ನಾವು ನೆಪೋಲಿಯನನ್ನು ಕುರಿತು ಯೋಚಿಸುತ್ತೇವೆ. ನಾನು ಬಾಲಕನಾಗಿದ್ದಾಗ ಆಡಿ ಮರ್ಫಿ ಎಂಬುವನು ಯುದ್ಧದ ನಾಯಕರಲ್ಲಿ ಒಬ್ಬನಾಗಿದ್ದನು; ಅನಂತರದಲ್ಲಿ ಅವನು ಸಿನೇಮಾ ಸ್ಟಾರ ಆದನು. ಹಿಂದಿನ ಮತ್ತು ಇಂದಿನ "ಚಿಕ್ಕ ಶರೀರವುಳ್ಳ"[22] ಚಲನ ಚಿತ್ರದ ನಟರ ಹೆಸರುಗಳನ್ನು ಹೇಳಬಹುದು. ಇನ್ನೊಬ್ಬ ಚಿಕ್ಕ ಮನುಷ್ಯನು ಹಿಂದಿನ ವರ್ಷಗಳಲ್ಲಿ ಅಗ್ರಿಕಲ್ಚರ್ ಟೀಚರ್ ಆಗಿದ್ದವನು ನನ್ನ ಜ್ಞಾಪಕಕ್ಕೆ ಬರುತ್ತಾನೆ. ಅವನ ಹೆಸರು ಆರ್ಚ ಗ್ಯಾರಿಸನ್.[23] ಅವನ ಕ್ಲಾಸಿನಲ್ಲಿದ್ದ ಹೆಚ್ಚು ದೊಡ್ಡದಾದ ಒಕ್ಕಲಿಗ ಬಾಲಕರೊಂದಿಗೆ ಅವನಿಗೆ ಸಮಸ್ಯೆ ಬರಲಿಲ್ಲ. "ನಾನು ಗಿಡ್ಡನಾಗಿರ ಬಹುದು, ಆದರೆ ಬಲವಾಗಿ ಬೆಳೆದಿದ್ದೇನೆ" ಎಂದು ಅವರನ್ನು ನೋಡಿ ಹೇಳುತ್ತಿದ್ದನು.

ಜಕ್ಕಾಯನೂ ಸಹ ಬಲವಾಗಿ ಬೆಳೆದಿದ್ದನೆಂದು ನಾನು ಕಲ್ಪನೆ ಮಾಡಿಕೊಳ್ಳು ತ್ತೇನೆ. ಅವನು ಸುಲಭವಾಗಿ ಬಿಟ್ಟುಕೊಡುವವನಲ್ಲ. ಅವನು ಯೇಸುವನ್ನು ನೋಡಲು ದೃಢನಿರ್ಧಾರ ಮಾಡಿಕೊಂಡನು. ಆದರೆ ಹೇಗೆ? ಅವನು ದಾರಿಯಲ್ಲಿ ಸಾಗಿದ್ದಾಗ ಮರಗಳ ಮೇಲೆ ನೋಡುವಾಗ, ಚಿಕ್ಕಮಕ್ಕಳು ಕೊಂಬೆಗಳ ಮೇಲೆ ಕುಳಿತು ನೋಡುತ್ತಿರು ವದನ್ನು ಕಂಡನು. ಅವನ ಮುಖದಲ್ಲಿ ನಗು ಮೂಡಿತು.

"ಮತ್ತು ಅವನು ಮುಂದೆ ಓಡಿ ಹೋದನು" (ವ. 4ಎ). ಆ ದಿನಗಳಲ್ಲಿ ಬೆಳೆದ ಪುರುಷರು, ವಿಶೇಷವಾಗಿ ಮಹತ್ವವುಳ್ಳ ಪುರುಷರು ಓಡುತ್ತಿರಲಿಲ್ಲ. ಅವರು ಗೌರವದಿಂದ ಮೆಲ್ಲನೇ ನಡೆಯುತ್ತಿದ್ದರು. ಜಕ್ಕಾಯನನ್ನು ಕುರಿತು ಅವನಿಗೆ ಗೌರವಕ್ಕಿಂತ ಯೇಸುವನ್ನು ನೋಡುವುದು ಬಹಳ ಮಹತ್ವದ್ದಾಗಿತ್ತು. ತನ್ನ ಮೇಲಂಗಿಯನ್ನು ಮೇಲಕ್ಕೆಳೆದು ತನ್ನ ಚಿಕ್ಕ ಕಾಲುಗಳಿಂದ ಮುಂದೋಡಿದನು. ಮೆಲ್ಲನೇ ನಡೆಯುತ್ತಿದ್ದ ಜನರ ಗುಂಪನ್ನು ದಾಟಿ ಹೋದನು.

ಜಕ್ಕಾಯನು "ಆತನನ್ನು ನೋಡುವದಕ್ಕಾಗಿ ಮುಂದೆ ಓಡಿಹೋಗಿ ಆತನು ಬರುತ್ತಿರುವ ಮಾರ್ಗದಲ್ಲಿದ್ದ ಆಲದ ಮರವನ್ನು ಹತ್ತಿದನು" (ವ. 4ಬಿ). ಜಕ್ಕಾಯನು ಮರವನ್ನೇರಿದನು. ತನ್ನ ಆಸಕ್ತಿಯಲ್ಲಿ ಚಿಕ್ಕ ಮಕ್ಕಳಂತೆ ವರ್ತಿಸುತ್ತ ಮರವನ್ನು ಹತ್ತಿದನು.[24] ಯೇಸುವನ್ನು ನೋಡಲೇ ಬೇಕೆಂದು ತೀರ್ಮಾನಿಸಿದ್ದರಿಂದ ಜನಸಮೂಹ ವಾಗಲೀ, ತನ್ನ ಎತ್ತರವಾಗಲೀ ತನ್ನ ಗರ್ವವಾಗಲೀ ಯಾವುದೂ ಅವನಿಗೆ ಅಡ್ಡಿಯಾ ಗಲಿಲ್ಲ.

ಕರ್ತನನ್ನು ಹುಡುಕುವ ವಿಷಯದಲ್ಲಿ ನಮಗೆ ಚಿಕ್ಕ ಪಾಠವನ್ನು ಮೋಶೆಯು ಈ ರೀತಿಯಲ್ಲಿ ಹೇಳಿದ್ದಾನೆ: "ನೀವು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ನಿಮ್ಮ ದೇವರಾದ ಯೆಹೋವನನ್ನು ಹುಡುಕಿದರೆ ಆತನು ನಿಮಗೆ ಸಿಕ್ಕುವನು" (ಧರ್ಮೋಪದೇಶಕಾಂಡ 4:29). ವರ್ಷಗಳ ಹಿಂದೆ ಒಬ್ಬ ವಿದ್ಯಾರ್ಥಿ ಹಾಗೂ ಶಿಕ್ಷಕ ಒಂದು ದಾರಿಯಲ್ಲಿ ನಡೆದು ಹೋಗುತ್ತಿದ್ದರು. ನಾವು ಕರ್ತನನ್ನು ಹೇಗೆ ಕಂಡು ಕೊಳ್ಳಬಹುದು ಎಂದು ವಿದ್ಯಾರ್ಥಿ ಪ್ರಶ್ನೆ ಮಾಡಿದನು. ಶಿಕ್ಷಕನು ಅವನನ್ನು ಅಲ್ಲಿ ಹರಿಯುತ್ತಿದ್ದ ನೀರಿನ ಕಾಲಿವೆಯಲ್ಲಿ ಅವನ ತಲೆಯನ್ನು ಮುಳುಗಿಸಿ ಹಿಡಿದನು.

ಅವನ ತಲೆ ಮೇಲಕ್ಕೆ ಎತ್ತಿ ಹಿಡಿದಾಗ ಅವನು ನಿಂತುಕೊಂಡನು. ಮುಖದ ಮೇಲೆ ನೀರು ಸುರಿಯುತ್ತಿತ್ತು. ಗಾಳಿಗಾಗಿ ಉಸಿರು ಬಿಡುತ್ತಿದ್ದನು. "ಹವೆಗಾಗಿ ನೀನು ಬಯಸಿದ ರೀತಿಯಲ್ಲಿ ಕರ್ತನನ್ನು ಕಂಡು ಕೊಳ್ಳಲು ಬಯಸಿದಾಗ ನೀನು ಆತನನ್ನು ಕಂಡುಕೊಳ್ಳುವಿ" ಎಂದು ಶಿಕ್ಷಕನು ಹೇಳಿದನು. ಕರ್ತನನ್ನು ಕಂಡು ಕೊಳ್ಳುವದಕ್ಕಾಗಿ ಮಾಡಬೇಕಾದದ್ದೆಲ್ಲವನ್ನೂ ಜಕ್ಕಾಯನು ಮಾಡಲು ಸಿದ್ಧನಾಗಿದ್ದನು. ಸತ್ಯವನ್ನು ಕಂಡುಕೊಳ್ಳಲು ನಾವು ನಿರ್ಧಾರ ಮಾಡುವ ಅವಶ್ಯಕತೆಯಿದೆ (ಯೋಹಾನ 8:32)!

## ಕರುಣೆಯ ಮೇಲೆ ಒಂದು ಚಿಕ್ಕ ಪಾಠ
## (ಲೂಕ 19:5-7)

"ಯೇಸು ಅಲ್ಲಿಗೆ ಬಂದಾಗ ಮೇಲಕ್ಕೆ ನೋಡಿದನು" (ವ. 5ಎ). "ಆತನು ಮೇಲಕ್ಕೆ ನೋಡಿ, ಅವನನ್ನು ಕಂಡನು" ಎಂದು KJV ಹೇಳುತ್ತದೆ. ದೊಡ್ಡ ಎಲೆಗಳ ಮಧ್ಯದಲ್ಲಿ ಅಡಗಿಕೊಂಡ ತನ್ನನ್ನು ಬಹುಶಃ ಯಾರೂ ನೋಡುವದಿಲ್ಲವೆಂದು ಜಕ್ಕಾಯನು ಯೋಚಿಸಿರಬೇಕು. ಆದರೆ ಯೇಸು ಅವನನ್ನು ನೋಡಿದನು. ಈ ಕಥೆಯು ಮುಕ್ತಾಯವಾಗುವ ವಚನವನ್ನು ಜ್ಞಾಪಿಸಿಕೊಳ್ಳಿರಿ (ವ. 10). ಜಕ್ಕಾಯನು ಮಾತ್ರವೇ ಹುಡುಕುವವನಾಗಿರಲಿಲ್ಲ; ಯೇಸುವು ಸಹ ಹುಡುಕುವವನಾಗಿದ್ದನು. ಕೆಟ್ಟು ಹೋಗಿರುವದನ್ನು ಯೇಸು ಹುಡುಕುತ್ತಿದ್ದನು.

"ಜಕ್ಕಾಯನೇ, ತಟ್ಟನೆ ಇಳಿದು ಬಾ"ಎಂದು ಅವನಿಗೆ ಹೇಳಿದನು (ವ. 5ಬಿ). ಅವನ ಹೆಸರನ್ನು ಹೇಳಿ ಕರೆದಾಗ ಜಕ್ಕಾಯನಿಗೆ ಎಷ್ಟು ಆಶ್ಚರ್ಯವಾಗಿರ ಬಹುದು.[25] ಅವನ ಬಗ್ಗೆ ಯೇಸು ಪ್ರತಿಯೊಂದನ್ನು ತಿಳಿದ್ದನು: ಅವನ ಹೆಸರು, ಅವನ ಅಗತ್ಯತೆಗಳು, ಅವನ ಹೃದಯದ ವೇದನೆ ... ಅವನ ಸಾಮರ್ಥ್ಯವನ್ನು.

"ಜಕ್ಕಾಯನೇ, ತಟ್ಟನೇ ಇಳಿದು ಬಾ, ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು" (ವ. 5ಸಿ). ಇದು ವಿಸ್ಮಯಕಾರಿ ಆದದ್ದಲ್ಲವೇ? ಮಧ್ಯಾಹ್ನದ ಊಟಕ್ಕಾಗಿ ಯೇಸು ಜಕ್ಕಾಯನ ಮನಗೆ ತನ್ನನ್ನೇ ಆಮಂತ್ರಿಸಿಕೊಂಡನು. ನಾವೆಂದೂ ಮೊದಲು ಭೇಟಿಯಾಗಿಲ್ಲವೆಂದು ತಿಳಿಯಿರಿ. ನಾನು ನಿಮ್ಮ ಬಳಿಗೆ ನಡೆದು ಬಂದು, "ನಾನು ನಿಮ್ಮೊಂದಿಗೆ ಮನೆಗೆ ಹೋಗುವೆನು. ಸಾಯಂಕಾಲದ ಊಟಕ್ಕೆ ಏನಿರುವುದು?"[26] ಎಂದು ಹೇಳಿದರೆ ನೀವು ಏನನ್ನು ಯೋಚಿಸುವಿರಿ. ಹೇಗಿದ್ದರೂ ಜಕ್ಕಾಯನ ಮನೆಗೆ ಹೋಗಬೇಕಾದರೆ ಯೇಸು ತನ್ನನ್ನು ತಾನೇ ಆಮಂತ್ರಿಸಿಕೊಳ್ಳಬೇಕು. ಯಾಕಂದರೆ ಜಕ್ಕಾಯನು ಆತನನ್ನು ಎಂದೂ ಆಮಂತ್ರಿಸುತ್ತಿದ್ದಿಲ್ಲ. ರಬ್ಬಿಗಳಾಗಲಿ, ಫರಿಸಾಯರಾಗಲಿ, ಸದ್ದುಕಾಯರಾಗಲಿ ಇಲ್ಲವೇ ಶಾಸ್ತ್ರಿಗಳಾಗಲಿ ಸುಂಕದವರ ಮನೆಗಳಿಗೆ ಹೋಗುತ್ತಿರಲಿಲ್ಲ (ಜಕ್ಕಾಯನು ಅತ್ಯುತ್ತಮವಾದ ಔತಣ ಏರ್ಪಡಿಸುವುದು, ನೂರಾರು ಆಮಂತ್ರಣ ಕಳುಹಿಸಿವುದು, ಔತಣದ ರಾತ್ರಿಯಲ್ಲಿ ಒಬ್ಬನೇ ಒಬ್ಬ ಅತಿಥಿ ಇಲ್ಲದೇ ಇರುವುದು -ಇದೆಲ್ಲವನ್ನೂ ಕಲ್ಪಿಸಿಕೊಳ್ಳುತ್ತೇನೆ). ಇಲ್ಲ, ಜಕ್ಕಾಯನು ಯೇಸುವನ್ನು ಆಮಂತ್ರಿ ಸುತ್ತಿದ್ದಿಲ್ಲ - ಆದುದರಿಂದ ಯೇಸು ತನ್ನನ್ನೇ ಆಮಂತ್ರಿಸಿಕೊಂಡನು.

"ತಕ್ಕದ್ದು" (must) ಎಂಬ ಪದವನ್ನು ಗಮನಿಸಿರಿ. "ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು." ಯೇಸು, "ಕೆಟ್ಟು ಹೋಗಿರುವದನ್ನು ಹುಡಿಕಿ ರಕ್ಷಿಸುವದಕ್ಕಾಗಿ" ಬಂದನು. ಹಾಗೂ ಕೆಟ್ಟು ಹೋದವರಲ್ಲಿ ಒಬ್ಬನು ಇಲ್ಲಿದ್ದನು. ಯೇಸು, ಮೇಲಿದ್ದ ಆ ಚಿಕ್ಕ ಮನುಷ್ಯನನ್ನು ನೋಡಿದಾಗ ಆ ಸಮಯದಲ್ಲಿ ಅವನು ಅಲ್ಲಿ ಯಾಕೆ ಇದ್ದಾರೆಂಬುದನ್ನು ತಿಳಿದು ಕೊಂಡನು. "ನಿನ್ನ ಮನೆಗೆ ರಕ್ಷಣೆ ಬರಬೇಕಾದರೆ ನಾನು

ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು" ಎಂದು ಯೇಸು ಜಕ್ಕಾಯನಿಗೆ ಹೇಳಿದನು.

ಯೇಸುವಿನ ಆಮಂತ್ರಣವನ್ನು ಜಕ್ಕಾಯನು ನಿರಾಕರಿಸ ಬಹುದಿತ್ತೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಯೇಸು ಯಾರ ಮೇಲೆಯೂ ಒತ್ತಾಯ ಮಾಡುವದಿಲ್ಲ. ಈ ಕಥೆಯು ಪ್ರಕಟನೆ 3:20ರಲ್ಲಿ ಲವೋದಿಕಿಯದ ಕ್ರೈಸ್ತರಿಗೆ ಮಾತು ಹೇಳಿದ್ದಕ್ಕೆ ದೃಷ್ಟಾಂತವಾಗಿದೆ: "ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು." ಯೇಸುವು ಅವನೊಂದಿಗೆ ಊಟ ಮಾಡಲು ಜಕ್ಕಾಯನ ಮನೆಯೊಳಗೆ ಪ್ರವೇಶಕ್ಕಾಗಿ ಕೇಳುತ್ತಿರುವನು. ಆದರೆ "ಬಾಗಿಲನ್ನು ತೆರೆದು" ಯೇಸುವು ಪ್ರವೇಶಿಸುವದಕ್ಕಾಗಿ ಅವಕಾಶಕೊಡುವುದು ಜಕ್ಕಾಯನಿಗೆ ಬಿಟ್ಟಿದ್ದಾಗಿತ್ತು. (ಯೇಸುವು ನಮ್ಮ ಹೃದಯದ ಬಾಗಿಲ ಬಳಿಯಲ್ಲಿ ನಿಂತುಕೊಂಡು ಪ್ರವೇಶಕ್ಕಾಗಿ ಕೇಳುತ್ತಿರುವನು. ಆದರೆ ಆತನನ್ನು ಒಳಗೆ ಬಿಡುತ್ತೇವೆಯೋ ಇಲ್ಲವೋ ಎಂಬುದು ನಮಗೆ ಸಂಬಂಧಿಸಿದೆ).

ಜಕ್ಕಾಯನ ಪ್ರತಿಕ್ರಿಯೆ ಯಾವುದು? "ಅವನು ತಟ್ಟನೇ ಇಳಿದು ಬಂದನು" (ವ. 6ಎ). ಅವನು ಅವಸರದಿಂದ ಮರದಿಂದ ಇಳಿದು ಬರುವದನ್ನು ನೋಡಿರಿ. ಗಂಭೀರವಾಗಿ ಕಾಣಿಸಿಕೊಳ್ಳುವದರ ಬಗ್ಗೆ ಅವನು ಚಿಂತಿಸಲಿಲ್ಲ. "ಆತನನ್ನು ಸಂತೋಷದಿಂದ ಸೇರಿಸಿಕೊಂಡನು" (ವ. 6ಬಿ). ಬಹುಶಃ ಜಕ್ಕಾಯನು ಸಂತೋಷದಿಂದಿದ್ದು ಬಹಳ ದಿನವಾಗಿರಬೇಕು. ಈಗ ಅವನ ಮುಖದ ಮೇಲೆ ದೊಡ್ಡ ಮುಗುಳ್ನಗೆಯಿತ್ತು.[27] ಯೇಸು ಅವನ ಜೀವನದಲ್ಲಿ ಬಂದದ್ದರಿಂದ, ಅವನ ಜೀವನದಲ್ಲಿ ಸಂತೋಷ ಬಂದಿತು.

ವಾಲ್ಟ ಡಿಸ್ನೆ ಅವರ ಕಾರ್ಯದೊಂದಿಗೆ ಪರಿಚಯವಿರುವ ಮಕ್ಕಳು "ಜಗತ್ತಿನಲ್ಲಿ ಹೆಚ್ಚು ಐಶ್ವರ್ಯವುಳ್ಳ ಬಾತುಕೋಳಿ" Scrooge McDuck ಬಗ್ಗೆ ತಿಳಿದಿರುವರು. ಅದು ಸಂತೋಷದಿಂದಿರುತ್ತದೆ. ಯಾಕಂದರೆ ಅದಕ್ಕೆ ಹಣದಿಂದ ತುಂಬಿದ ಈಜುಕೊಳವಿದೆ. ಅದರಲ್ಲಿ ಧುಮುಕಿ ಹಣದಲ್ಲೆಲ್ಲಾ ಈಜಾಡುವುದರಲ್ಲಿ ಅದಕ್ಕೆ ಸಂತೋಷವಿರುವುದು. ಈ ಬಾತುಕೋಳಿಯು ಕಾರ್ಟೂನಿನ ಒಂದು ಪಾತ್ರ. ಆದರೆ ಸಂತೋಷವನ್ನು ಕಂಡುಕೊಳ್ಳಲು ಅದು ಮಾರ್ಗವಾಗಿದೆ ಎಂದು ಯೋಚಿಸುವ ಸಾವಿರಾರು ಜನರನ್ನು ಪ್ರತಿನಿಧೀಕ ರಿಸುತ್ತದೆ. ಹೀಗಿರುವಲ್ಲಿ ಜಕ್ಕಾಯನು ಸುದೈವದ ಮೂಲಕವಾಗಿ ಸಂತೋಷವು ಬರಲಿಲ್ಲವೆಂಬುದನ್ನು ಕಂಡುಕೊಂಡನು. ಅದು ಯೇಸು ಅವನಿಗಾಗಿ ತೋರಿಸಿದ ಚಿಂತನೆ ಹಾಗೂ ಕನಿಕರದಿಂದ ಬಂದಿತು.

ಯೇಸು ಹಾಗು ಜಕ್ಕಾಯನು ಹೋಗುತ್ತಿರುವಾಗ[28] ವಚನ 7 ಜನರ ಪ್ರತಿಕ್ರಿಯೆಯನ್ನು ಹೇಳುತ್ತದೆ. "ಇದನ್ನು ನೋಡಿದವರೆಲ್ಲರು - ಈತನು ಪಾಪಿಯಾಗಿರುವವನ ಬಳಿಯಲ್ಲಿ ಇಳು ಕೊಳ್ಳುವದಕ್ಕೆ ಹೋಗಿದ್ದಾನೆ." "ಎಲ್ಲರು" ಎಂಬ ಪದವು ಒಳಗೊಂಡಿರುವದನ್ನು ತೋರಿಸುತ್ತದೆ: ಯೇಸುವಿನೊಂದಿಗೆ ಪ್ರಯಾಣ ಮಾಡುತ್ತಿದ್ದವರು ಗುಣುಗುಟ್ಟಲು ಪ್ರಾರಂಭಿಸಿದರು. ಯೆರಿಕೋವಿನಲ್ಲಿದ್ದವರು ಗುಣುಗುಟ್ಟಲಿಕ್ಕೆ ಪ್ರಾರಂಭಿಸಿದರು. ಯಾರೊಬ್ಬರೂ ಸಂತೋಷ ಪಡಲಿಲ್ಲ. ತಪ್ಪಿ ಹೋದವರನ್ನು ಹುಡುಕಿ ಸಹಾಯ ಮಾಡುವುದು ತನ್ನ ಉದ್ದೇಶವಾಗಿತ್ತೆಂದು ಯೇಸು ಬಹಳ ಸಲ ಹೇಳಿದ್ದನು (ಲೂಕ 15). ಇದಕ್ಕೆ ಮೊದಲು ಸುಂಕದವರೊಂದಿಗೆ ಪಾಪಿಗಳೊಂದಿಗೆ ಊಟ ಮಾಡಿದ್ದಕ್ಕಾಗಿ ಟೀಕಿಸಲ್ಪಟ್ಟಾಗ, "ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು" (ಮತ್ತಾಯ 9:12) ಎಂದು ಆತನು ಹೇಳಿದ್ದನು. ಅದು ಆತನ ಕೇಳುಗರಿಗೆ ಕಲಿಯ ಬೇಕಾದ ಕಠಿಣವಾದ ಪಾಠವಾಗಿತ್ತು.[29]

ನೀನು ಮತ್ತು ನಾನು ಕನಿಕರದ ಮೇಲಿನ ಈ ಚಿಕ್ಕ ಪಾಠವನ್ನು ಕಲಿಯುವ

ಅವಶ್ಯಕತೆಯಿದೆ; ಯೇಸುವು ಪ್ರತಿಯೊಬ್ಬರನ್ನೂ ಪ್ರೀತಿಸುವನು. ಒಬ್ಬ ವ್ಯಕ್ತಿಯು ಪಾಪದಲ್ಲಿ ಎಷ್ಟೇ ಆಳದಲ್ಲಿದ್ದರೂ ಇಲ್ಲವೇ ಅವನು ಎಷ್ಟೇ ಕೆಟ್ಟವನಾಗಿದ್ದರೂ ಯೇಸು ಅವನನ್ನು ಪ್ರೀತಿಸುವನು ಮತ್ತು ನಾವು ಹಾಗೆ ಪ್ರೀತಿಸಬೇಕು.

## ಮಾನಸಾಂತರದ ಮೇಲೆ ಒಂದು ಚಿಕ್ಕ ಪಾಠ

## (ಲೂಕ 19:8)

ಯೇಸು ಜಕ್ಕಾಯನ ಮನೆಯಲ್ಲಿದ್ದ ವಿವರವನ್ನು ಲೂಕನು ಕೊಡುವದಿಲ್ಲ. ಯೇಸುವು ಎಷ್ಟು ಸಮಯ ಇದ್ದನು, ಯಾವುದರ ಬಗ್ಗೆ ಅವರು ಮಾತಾಡಿದರು, ಆ ಚಿಕ್ಕ ಮನುಷ್ಯನ ಹೃದಯವನ್ನು ಯೇಸು ಹೇಗೆ ಸ್ಪರ್ಶಿಸಿದನು ಎಂಬುದನ್ನು ತಿಳಿಯ ಬಯಸುತ್ತೀರಲ್ಲವೇ? ವಚನ 8ರಲ್ಲಿ ಲೂಕನು ಪರಿಣಾಮವನ್ನು ಮಾತ್ರ ಕೊಡುತ್ತಾನೆ: "ಜಕ್ಕಾಯನು ನಿಂತುಕೊಂಡನು." (ವ. 8ಎ) ಜಕ್ಕಾಯನು ಏನೇ ಮಾಡುತ್ತಿದ್ದಿರ ಬಹುದು ಅವನು ಒಂದು ಪ್ರಕಟನೆ ಮಾಡಲು ಥಕ್ಕನೇ ನಿಂತುಕೊಂಡನು "ಹಾಗೂ ನಿಂತುಕೊಂಡು ಜಕ್ಕಾಯನು ಹೇಳಿದನು"[30] ಎಂದು ಮೂಲ ಪಠ್ಯದಲ್ಲಿದೆ. ಅವರು ಊಟ ಮಾಡುತ್ತಿದ್ದಾಗ ಜರಗುತ್ತಿದ್ದುರಿಂದ, ಜಕ್ಕಾಯನ ಪ್ರಕಟನೆಯು ಬಹುಶಃ ಊಟ ಮಾಡುತ್ತಿರುವಾಗ ಇಲ್ಲವೇ ಊಟದ ನಂತರ ಕೊಡಲ್ಪಟ್ಟಿರಬೇಕು. ಎಲ್ಲರ ಗಮನ ಸೆಳೆಯಲು ಹಾಗೂ ತಾನು ಹೇಳುವದರ ಬಗ್ಗೆ ಗಂಬೀರತೆಯನ್ನು ಒತ್ತಿತೋರಿಸಲು ಅವನು ಎದ್ದು ನಿಂತು ಕೊಂಡನು.

"ಕರ್ತನೇ, ನೋಡು, ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ" (ವ. 8ಬಿ) ಎಂದು ಜಕ್ಕಾಯನು ಯೇಸುವಿಗೆ ಹೇಳಿದನು. ಮೂಲ ಬಾಷೆಯಲ್ಲಿ "ಕೊಡುತ್ತೇನೆ" ಎಂಬುದು ವರ್ತಮಾನ ಕಾದಲ್ಲಿದ್ದು[31] ಅಕ್ಷರಶಃವಾಗಿ, "ನಾನು ಬಡವರಿಗೆ ಕೊಡುತ್ತಿರುವೆನು" ಎಂದಾಗುತ್ತದೆ. ಆ ದಿನಗಳಲ್ಲಿ ಬಡವರಿಗಾಗಿ ಹುಡುಕ ಬೇಕಾಗಿರಲಿಲ್ಲ. ಹಗಲೂ ರಾತ್ರಿ ಯೆಹೂದ್ಯರ ಹತ್ತಿರ ಅವರಿರುತ್ತಿದ್ದರು. ಬಹುಶಃ ಈ ಸಂದರ್ಭದಲ್ಲಿ ಜಕ್ಕಾಯನು ಕೈತುಂಬ ನಾಣ್ಯಗಳನ್ನು ಹಿಡಿದು ಕೊಂಡು ಬಾಗಿಲ ಬಳಿಗೆ ಬಂದು ಓಡಿಹೋಗಿ ಆಶ್ಚರ್ಯಚಕಿತ ಭಿಕ್ಷುಕರ ಕೈಗಳಲ್ಲಿ ಅವುಗಳನ್ನು ಹಾಕಿರಬೇಕು.[32]

ಜಕ್ಕಾಯನ ಮನೆಯ ಹೊರಗೆ ಗುಣುಗುಟ್ಟುವಿಕೆಯಿತ್ತು. ಮನೆಯೊಳಗೆ, ಮಾರ್ಪಾಟಾಗುತ್ತಿತ್ತು.

ಅವನು ತನ್ನ ಪ್ರಕಟನೆಯನ್ನು ಮುಂದುವರಿಸಿದನು, "ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳಕೊಂಡದ್ದೇಯಾದರೆ" (ವ. 8ಸಿ). ಮೂಲದಲ್ಲಿ, ಇದು ಪ್ರಥಮ ದರ್ಜೆಯ ಷರತ್ತಿನ ವಾಕ್ಯವಾಗಿದ್ದು ಹೇಳಿಕೆಯು ಸತ್ಯದಿಂದ ಕೂಡಿರುತ್ತಿತ್ತು. ಅನ್ಯಾಯವು ಬೇಕೆಂತಲೇ ಮಾಡಲ್ಪಟ್ಟಿತ್ತೋ ಇಲ್ಲವೇ ಅವನ ಗಮನಕ್ಕೆ ಬಾರದೇ ಆಗಿತ್ತೋ ನಮಗೆ ಗೊತ್ತಿಲ್ಲ (ಜಕ್ಕಾಯನಿಗಾಗಿ ಕೆಲಸ ಮಾಡಿದ ಬೇರೆ ಕೆಲಸದವರು ಇದ್ದರೆಂಬುದನ್ನು ಜ್ಞಾಪಿಸಿಕೊಳ್ಳಿರಿ).

"ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ" (ವ. 8ಎ) ಒಬ್ಬ ಕಳ್ಳನು ಕದ್ದುಕೊಂಡದ್ದರ ಬಗ್ಗೆ ಅರಿಕೆ ಮಾಡಿದರೆ ಅವನು ತಾನು ಕದ್ದುಕೊಂಡದ್ದನ್ನು ಅದಕ್ಕೆ ಅದರ ಐದರಲ್ಲಿ ಒಂದು ಭಾಗವನ್ನು ಕೂಡಿಸಿ ಹಿಂದಿರುಗಿ ಕೊಡಬೇಕೆಂದು ನಿಯಮ ಹೇಳುತ್ತಿತ್ತು. ಅವನು ಒಂದು ನೂರು ರೂಪಾಯಿ ಕದ್ದುಕೊಂಡಿದ್ದರೆ ಒಂದನೂರು ಇಪ್ಪತ್ತು ರೂಪಾಯಿ ಹಿಂದಿರುಗಿ ಕೊಡಬೇಕಾಗಿತ್ತು.[33] ಅತಿರೇಕದ ಸಂದರ್ಭದಲ್ಲಿ ಎರಡು ಪಟ್ಟು ಇಲ್ಲವೇ ನಾಲ್ಕು ಪಟ್ಟು ಕೊಡಬೇಕಾಗುತ್ತಿತ್ತು.[34] ಆದರೆ ಇದು ಜಕ್ಕಾಯನ

ಪರಿಸ್ಥಿತಿಗೆ ಹೊಂದಿ ಕೊಳ್ಳುವದಿಲ್ಲ. ಅವನು ನಾಲ್ಕು ಪಟ್ಟು ಕೊಡಬೇಕಾಗಿರಲಿಲ್ಲ. ಆದರೆ ಸಾಮಾನ್ಯ ಮೊತ್ತದಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ. "ನಾನು ಒಬ್ಬನಿಂದ 100 ರೂಪಾಯಿ ತೆಗೆದು ಕೊಂಡಿದ್ದೇನೆ. ಅವನಿಗೆ 400 ರೂಪಾಯಿ ಹಿಂದಿರುಗಿ ಕೊಡು ತ್ತೇನೆ" ಎನ್ನುವ ರೀತಿಯಲ್ಲಿ ಅವನು ಹೇಳಿದನು.

ಜಕ್ಕಾಯ ಮನೋಭಾವನೆಯು ಸತ್ಯವೇದದ ಮಾನಸಾಂತರದ ಮಹತ್ವದ ವಿಷಯೊಂದರ ಸುಂದರವಾದ ಪ್ರದರ್ಶನವಾಗಿತ್ತು. "ಮಾನಸಾಂತರ" ಎಂಬ ಪದವು "ಮನಸ್ಸು ಇಲ್ಲವೇ ಮನೋಭಾವನೆಯ ಬದಲಾವಣೆ" ಎಂದರ್ಥ ಕೊಡುವ ಗ್ರೀಕ ಸಂಯುಕ್ತ ಪದದ ಅನುವಾದವಾಗಿದೆ. ಈ ಪದವು ಜನರಿಗೆ ಅನ್ವಯಿಸಲ್ಪಡುವಾಗ ಇದು ಸಾಮಾನ್ಯವಾಗಿ ಪಾಪದ ಬಗೆಗಿನ ಮನೋಭಾವನೆಯು ಇಲ್ಲವೇ ಮನಸ್ಸಿನ ಬದಲಾವಣೆಗೆ ಸಂಬಂಧಿಸಿರುತ್ತದೆ. ಒಬ್ಬನು ಪಾಪದ ಭಯಂಕರತೆಯನ್ನು ಕಂಡುಕೊಂಡು, ದೇವರ ಸಹಾಯದಿಂದ ಅದನ್ನು ತನ್ನ ಜೀವನದಿಂದ ಕಿತ್ತು ಹಾಕಲು ನಿರ್ಧರಿಸುವದನ್ನು ತೋರಿಸುತ್ತದೆ. ಮನಃ ಪರಿವರ್ತನೆಯ ಮುಖ್ಯ ಸಂಗತಿಯು ಮಾನವ ರೀತಿಯಲ್ಲಿ ಸಾಧ್ಯವಾದಷ್ಟರ ಮಟ್ಟಿಗೆ ಹಿಂದಿನ ಸಮಯದ ಸಂಗತಿಗಳನ್ನು ಹಿಂದಕ್ಕೆ ಕೊಡಲು ಮನಸ್ಸು ಮಾಡುವುದಾಗಿದೆ "ಮಾನವ ರೀತಿಯಲ್ಲಿ ಸಾಧ್ಯವಾದ" ಎಂಬ ಮಾತುಗಳನ್ನು ಉಪಯೋಗಿಸಿದ್ದೇನೆ. ಯಾಕಂದರೆ ಹಿಂದೆ ಮಾಡಿದ್ದನ್ನು ತೆಗೆದು ಹಾಕುವಂಥದ್ದು ಸಾಧ್ಯವಾಗುವದಿಲ್ಲ. ಉದಾಹರಣೆಯಾಗಿ, ಯೇಸುವನ್ನು ಕ್ರೂಜೆಗೆ ಹಾಕಿದ ಜನರಿಗೆ ಮನ ಬದಲಾವಣೆ ಹೊಂದಲು ಪೇತ್ರನು ಹೇಳಿದನು (ಅ. ಕೃ. 2:23, 38). ಆದರೆ ಅವರ ಭಯಂಕರವಾದ ಕಾರ್ಯವನ್ನು ರದ್ದು ಪಡಿಸುವ ಮಾರ್ಗವೇ ಇರಲಿಲ್ಲ. ಹೆಚ್ಚಾದ ಜನರ ವಿಷಯದಲ್ಲಿ ಒಂದು ರೀತಿಯಲ್ಲಿ ಹಿಂದಿರುಗಿಸುವ ಸಾಧ್ಯತೆಯಿರುವುದು. "... ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲಿತಗಳಿಂದ ತೋರಿಸಿರಿ" (ಲೂಕ 3:8) ಎಂದು ಸ್ನಾನಿಕನಾದ ಯೋಹಾನನು ಹೇಳಿ ದನು. ತೋಟಕ್ಕೆ ಹೋಗುಬೇಕೆಂದು ತನ್ನ ತಂದೆ ಹೇಳಿದ ಮಾತಿಗೆ ವಿಧೇಯನಾಗದೇ "ತರುವಾಯ ಪಶ್ಚಾತ್ತಾಪ ಪಟ್ಟು ತೋಟಕ್ಕೆ ಹೋದನು" (ಮತ್ತಾಯ 21:29) ಎಂದು ಓದುತ್ತೇವೆ. ದುರದೃಷ್ಟಕರದಿಂದ ಮನಃ ಪರಿವರ್ತನೆಯ ವಿಷಯದಲ್ಲಿ ಪುನಃ ಕೊಡುವದರ ಮಹತ್ವವು ಕಡೆಗಣಿಸಲ್ಪಟ್ಟಿದೆ.

ಮಾರ್ಪಡುವಿಕೆಯ ಕಠಿಣವಾದ ಭಾಗವು ದೀಕ್ಷಾಸ್ನಾನವಲ್ಲ ಆದರೆ ಮನಃ ಪರಿವರ್ತನೆಯಾಗಿದೆ. ಮನಃ ಪರಿವರ್ತನೆಯು ಮುರಿದ ಹೃದಯವುಳ್ಳವರಾಗುವದನ್ನು ಒಳಗೊಂಡಿದೆ. ಮನಃ ಪರಿವರ್ತನೆ ಅಂದರೆ ತನ್ನ ಜೀವನದಲ್ಲಿ ನಿಜವಾದ ಬದಲಾವಣೆಗಳನ್ನು ತರುವದಕ್ಕೆ ಸಾಕಷ್ಟು ಒಲಿಯುವುದು. ನಿಮ್ಮ ಮಾರ್ಪಪಡಿಸುವಿಕೆಯು ನಿಮ್ಮ ಜೀವನದಲ್ಲಿ ಬದಲಾವಣೆ ಮಾಡಿರದಿದ್ದರೆ, ನೀವು ನಿಜವಾಗಿಯೂ ಮಾರ್ಪಟ್ಟಿರುವಿರೋ ಇಲ್ಲವೋ ಎಂಬುದನ್ನು ಯೋಚಿಸಲು ಬಯಸಬಹುದು.[35]

ಜಕ್ಕಾಯನ ಮಾರ್ಪಡುವಿಕೆಯು ಅವನ ಜೀವನದಲ್ಲಿ ಭಿನ್ನತೆ ಮಾಡಿತು. ಮನಃ ಪರಿವರ್ತನೆಯ ಬಗ್ಗೆ ಈ ಚಿಕ್ಕ ಪಾಠವನ್ನು ನಾವು ಕಲಿಯಬೇಕಾಗಿದೆ.

## ರಕ್ಷಣೆಯ ಮೇಲೆ

## ಒಂದು ಚಿಕ್ಕ ಪಾಠ (ಲೂಕ 19:9, 10)

ಜಕ್ಕಾಯನ ಮಾತುಗಳಿಗೆ ಯೇಸುವು "ಈ ಹೊತ್ತು ಈ ಮನೆಗೆ ರಕ್ಷಣೆಯಾಯಿತು"

(ವ. 9ಎ) ಎಂದು ಉತ್ತರ ಕೊಟ್ಟನು. ಯೇಸು ಜಕ್ಕಾಯನ ಮನೆಗೆ ಬಂದದ್ದರಿಂದ, ಯೇಸುವಿನ ಪ್ರೀತಿ ಹಾಗು ಕನಿಕರಕ್ಕೆ ಜಕ್ಕಾಯನು ಉತ್ತರ ಕೊಟ್ಟಿದ್ದರಿಂದ ಜಕ್ಕಾಯನ ಮನೆಗೆ ರಕ್ಷಣೆಯು ಬಂದಿತು.

"ಇವನು ಸಹ ಅಬ್ರಹಾಮನ ವಂಶಿಕನಲ್ಲವೇ" ಎಂದೂ ಯೇಸು ಕೂಡಿಸಿದನು (ವ. 9ಬಿ). ಜಕ್ಕಾಯನು ಅಬ್ರಹಾಮನ ಮಗನೆಂದು ಫರಿಸಾಯರು ನಂಬಲಿಲ್ಲ. ಆದರೆ ಅವನು ಆಗಿದ್ದಾನೆಂದು ಯೇಸು ಹೇಳಿದನು. ಯೇಸು ಅದಕ್ಕಿಂತಲೂ ಹೆಚ್ಚು ಹೇಳುತ್ತಿದ್ದನು. ಅಬ್ರಹಾಮನಂತೆ ಜಕ್ಕಾಯನು ವಿಶ್ವಾಸಕ್ಕೆ ಬಂದದ್ದರಿಂದ ಅವನು ಅಬ್ರಹಾಮನ ನಿಜವಾದ ಮಗನೆಂದು ಯೇಸು ಹೇಳಿದನು.[36] ಇನ್ನೊಂದು ಕಡೆಯಲ್ಲಿ ಫರಿಸಾಯರು ತಮ್ಮ ಪುರಾತನ ಸಂತತಿಯಲ್ಲಿ ತಾವೇ ಗರ್ವಪಟ್ಟವರು ಅಬ್ರಹಾಮನ ನಿಜವಾದ ಮಕ್ಕಳಾಗಿರುವದಿಲ್ಲ. ಯಾಕಂದರೆ ಅವರು ಯೇಸುವಿನಲ್ಲಿ ನಂಬಿಕೆಯಿಡಲಿಲ್ಲ.

ಮುಂದೆ ಮನಕಲಕುವ ಮಾತುಗಳಿವೆ: "ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" (ವ. 10). ಈ ವಚನವು ನಾವು ಕಳೆದು ಹೋಗಿದ್ದೇವೆ, ಪಾಪದಿಂದ ಕೆಟ್ಟು ಹೋಗಿದ್ದೇವೆ ಎಂದು ಹೇಳುತ್ತದೆ. "ಕಳೆದು ಹೋದದ್ದು" ಎಂಬ ಪದವನ್ನು ಪ್ರಸಂಗಗಳಲ್ಲಿ ಅನೇಕ ಸಲ ಕೇಳಿದ್ದೇವೆ. ಅದು "ರಕ್ಷಿಸಲ್ಪಟ್ಟದ್ದು" ಎಂಬುದಕ್ಕೆ ವಿರುದ್ಧವಾದದ್ದು ಎಂದು ಮಾತ್ರ ಯೋಚಿಸುತ್ತೇವೆ. "ಕಳೆದು ಹೋದದ್ದು" ಎಂಬುದರ ಮೂಲ ಅರ್ಥವು "ಸ್ಥಳದಲ್ಲಿ ಇಲ್ಲದ್ದು, ಆದುದರಿಂದ ನಿರುಪಯೋಗಿಯಾದದ್ದು" ಎಂಬುದು. ಇದರ ಅರ್ಥವನ್ನು ಲೂಕ 15ರಲ್ಲಿ ಕಳೆದು ಹೋದ ನಾಣ್ಯ, ತಪ್ಪಿಹೋದ ಕುರಿ, ಪೋಲಿಹೋದ ಮಗನ ಕಥೆಗಳಿಂದ ದೃಷ್ಟಾಂತ ವಾಗಿ ಹೇಳಬಹುದು. ಮನುಷ್ಯನು ದೇವರಿಂದ ಅಗಲಿಸಲ್ಪಟ್ಟನು. ತಾನು ಇರುವದಕ್ಕಾಗಿ ಇರುವ ತನ್ನ ಉದ್ದೇಶವನ್ನು ನೆರವೇರಿಸಲು ಅಶಕ್ತನಾಗಿರುವನು. ನೀನೂ ನಾನೂ ನಮ್ಮ ಪಾಪಗಳಲ್ಲಿ ಕೆಟ್ಟು ಹೋಗುವಾಗ, ದೇವರನ್ನು ಮಹಿಮೆ ಪಡಿಸುವ ಜೀವನದ ನಮ್ಮ ಉದ್ದೇಶಗಳನ್ನು ನೆರವೇರಿಸಲಾರೆವು (ಮತ್ತಾಯ 5:13-16)!

ವಚನದ ಅದ್ಭುತವಾದ ಭಾಗವು ಯೇಸು ಕೆಟ್ಟು ಹೋಗಿರುವದನ್ನು ಹುಡುಕುವ ದಕ್ಕಾಗಿ ಬಂದನು ಎಂಬುದು. "ಹುಡುಕು" ಎಂಬ ಪದವು ಆಸಕ್ತಿಯಿಂದ ಹುಡುಕು, ಹುಡುಕಿ ಕಂಡು ಹಿಡಿಯಲು ಅವಶ್ಯವಾಗಿರುವ ಎಲ್ಲಾ ಪ್ರಯತ್ನವನ್ನು ಮಾಡು ಎಂದಾಗುತ್ತದೆ. ನಾವು ಎಲ್ಲಿ ಇರತಕ್ಕದ್ದೋ ಅಲ್ಲಿರುವಂತೆಯೂ ನಾವು ಸಾಧಿಸ ಬೇಕಾದದ್ದನ್ನು ಸಾಧಿಸಲಿಕ್ಕಾಗುವಂತೆಯೂ ನಮ್ಮನ್ನು ಕಂಡುಕೊಳ್ಳಲು ಹಾಗೂ ದೇವರ ಬಳಿಗೆ ಹಿಂದಿರುಗಿ ತರಲು ಯೇಸುವು ಬಂದನು.

ಇದು ರಕ್ಷಣೆಯ ಮೇಲಿನ ಚಿಕ್ಕ ಪಾಠವು. ಯೇಸು ಹುಡುಕಿ ರಕ್ಷಿಸಲು ಬಂದನು. ಆತನು ಬೇಗನೇ ಯೆರಿಕೋವಿನಿಂದ ಯೆರೂಸಲೇಮಿಗೆ ಹೋಗಲಿಕ್ಕಿದ್ದನು. ಆತನು ತನ್ನ ವೈರಿಗಳನ್ನು ಎದುರಿಸಿ ಒಂದು ವಾರದಲ್ಲಿ ಶಿಲುಬೆಯ ಮರಣ ಹೊಂದಲಿಕ್ಕಿದ್ದನು. ಅದು ಯೇಸು ಈ ಲೋಕಕ್ಕೆ ಬಂದದ್ದರ ಉದ್ದೇಶವಾಗಿತ್ತು (ನೀನು ಮತ್ತು ನಾನು ಯೇಸುವಿನ ಆಮಂತ್ರಣಕ್ಕೆ ಉತ್ತರ ಕೊಡದಿದ್ದರೆ, ನಮ್ಮ ಸ್ವಂತ ಜೀವನಗಳಾಗಿ ಇದ್ದ ಯೇಸುವಿನ ಉದ್ದೇಶವನ್ನು ಸೋಲಿಸುವವರಾಗಿರುವೆವು).

"ಈ ಚಿಕ್ಕ ಕುಳ್ಳ ಪಾಪಿಯು" ಯೇಸುವಿನ "ದೊಡ್ಡ ಕುಳ್ಳ" ಅನುಯಾಯಿ ಆದದ್ದು ಜಕ್ಕಾಯನಿಗೆ ಅದೆಂಥಾ ಕುತೂಹಲಭರಿತ ದಿನವಾಗಿತ್ತಲ್ಲವೇ![37]

## ಮುಕ್ತಾಯ

ಜಕ್ಕಾಯನ ಸ್ಥಾನದಲ್ಲಿ ನಮ್ಮನ್ನಿಟ್ಟುಕೊಳ್ಳುವುದು ಕಠಿಣವಾದದ್ದಾಗುವದಿಲ್ಲ. ಆ ಚಿಕ್ಕ ಮನುಷ್ಯನಂತೆ ನಮ್ಮಲ್ಲಿ ಕೆಲವರು ಆತ್ಮಿಕವಾಗಿಯೂ ಮಾನಸಿಕವಾಗಿಯೂ ನಮ್ಮ ಜೀವನದಲ್ಲಿ ಗಲಿಬಿಲಿಯಲ್ಲಿದ್ದು "ಮರದ ಮೇಲೆ ಇದ್ದೇವೆ."[38] ನಮ್ಮ ಪರಿಸ್ಥಿತಿಯು ಏನೇ ಆಗಿರಲಿ ನಾವು ಎಲ್ಲಿಯೇ ಇರಲಿ, ಯೇಸುವು ನಮ್ಮನ್ನು ನೋಡುತ್ತಾನೆ. "ನಾನು ನಿನ್ನೊಂದಿಗೆ ಮನೆಗೆ ಹೋಗುತ್ತೇನೆ; ನಿನ್ನ ಜೀವನದ ಭಾಗವಾಗಿರಲು ಬಯಸುತ್ತೇನೆ" ಎಂದೂ ಇನ್ನೂ ಹೇಳುತ್ತಿರುತ್ತಾನೆ. ಜಕ್ಕಾಯನಂತೆ ಯೇಸುವಿನ ಆಮಂತ್ರಣವನ್ನು ಸ್ವೀಕರಿಸಬಹುದು. ಇಲ್ಲವೇ ಅದನ್ನು ತಿರಸ್ಕರಿಸಬಹುದು.

ಜಕ್ಕಾಯನು ಆ ಬೆಳಿಗ್ಗೆ ಎದ್ದನು. ಆ ದಿನವು ಎಷ್ಟು ಉದ್ರೇಕ ಕಾರಿಯಾಗುವದೆಂದು ತಿಳಿದಿರಲಿಲ್ಲ. ಈ ದಿನವು ನಿಮಗೆ ಹೇಗೆ ಪ್ರಾರಂಭವಾಯಿತೆಂಬುದು ನನಗೆ ಗೊತ್ತಿಲ್ಲ. ಬಹುಶಃ ನೀವಿನ್ನೂ ಆಯಾಸ ಗೊಂಡವರೂ ನಿದ್ರೆಯುಳ್ಳವರೂ ಆಗಿ ಎದ್ದಿರಬಹುದು. ಬಹುಶಃ ಈ ದಿನವೂ ಹೆಚ್ಚಾಗಿ ಸುಧಾರಿಸಿರಲಿಕ್ಕಿಲ್ಲ.[39] ಹೀಗಿದ್ದರೂ ನಿಮ್ಮ ಹೃದಯದ ಬಾಗಿಲ ಬಳಿಯಲ್ಲಿ ಯೇಸುವು ನಿಂತುಕೊಂಡಿರುವದನ್ನು ನೋಡಿದರೆ, ಒಳಗೆ ಬರಲು ಕೇಳುತ್ತಿದ್ದರೆ, ಈ ದಿನವು ಎಷ್ಟು ಆಶ್ಚರ್ಯಕರವಾದದ್ದಾಗಿ ಮುಗಿಯಬಹುದು. ಆತನ ಪ್ರೀತಿಗೆ ನೀವು ಉತ್ತರ ಕೊಟ್ಟರೆ, "ಈ ಹೊತ್ತು (ನಿನ್ನ) ಮನೆಗೆ ರಕ್ಷಣೆಯಾಯಿತು!" ಎಂದು ನಿಮಗೂ ಹೇಳಲ್ಪಡುವುದು.

---

ಟಿಪ್ಪಣಿಗಳು

[1]ಜಕ್ಕಾಯನ ಬಗ್ಗೆ ಕೇಳಿದ ಎಲ್ಲಾ ಮಕ್ಕಳು ತಮ್ಮ ಕೈಗಳನ್ನು ಮೇಲಕ್ಕೆತ್ತಬೇಕೆಂದು ಪ್ರಸಂಗದಲ್ಲಿ ಕೇಳಬಹುದು. [2]ಈ ಹಾಡನ್ನು ಮಕ್ಕಳೊಂದಿಗೆ ಹಾಡಬಹುದು. [3]ಬೇರೆ ಬೇರೆ ಸ್ಥಳಗಳಲ್ಲಿ ಭಿನ್ನತೆಗಳಿವೆ: "ಊಟ ಮಾಡಲು ನಿನ್ನ ಮನೆಗೆ ಹೋಗುವೆನು" ಇಲ್ಲವೇ ಬ್ರಿಟೀಶ್ ಹಿನ್ನೆಲೆಯುಳ್ಳ ಆಸ್ಟ್ರೇಲಿಯಾ ಮತ್ತು ಇತರ ದೇಶಗಳಲ್ಲಿ "ಟೀಗಾಗಿ (ಚಹಕ್ಕಾಗಿ) ನಿನ್ನ ಮನೆಗೆ ಹೋಗುವೆನು" ಎಂದು ಹೇಳುವರು. [4]ಇದರ ಅರ್ಥ ಇದರ ಆರಂಭವು ಹಿಂದಿನ ದಿನಾಂಕವುಳ್ಳ ಲಿಖಿತ ದಾಖಲೆಗಳು ಎಂದಾಗುತ್ತದೆ. [5]ಯೆರಿಕೋವಿನ ಸ್ಥಳದ ಮೇಲೆ ಒಟ್ಟು ಏಳು ಮಟ್ಟಗಳು ಒಂದರ ಮೇಲೆ ಒಂದು ಕಟ್ಟಲ್ಪಟ್ಟಿವೆ. [6]"ಖರ್ಜೂರ ಮರಗಳ ಪಟ್ಟಣ" ಎಂದು ಅದು ಕರೆಯಲ್ಪಟ್ಟಿದೆ. [7]ತನ್ನ ಮೆಚ್ಚಿಕೆಯ ಗುರುತಾಗಿ ಮಾರ್ಕ ಎಂಟೋನಿಯು ಈ ಪಟ್ಟಣವನ್ನು ಕ್ಲೆಯೊಪಾತ್ರಳಿಗೆ ಕೊಟ್ಟಿದ್ದು ಪಟ್ಟಣದ ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ. [8]ಇದು ಮೂಲ ಪಠ್ಯದ ಅಕ್ಷರಶಃ ಹೇಳಿಕೆಯಾಗಿದೆ. NIVಯು "ಸಿಕಾಮೋರ ಫಿಗ್‌ಟ್ರೀ" ಎಂದು ಕರೆಯುತ್ತದೆ. [9]ಮುಲ್‌ಬೆರ್ರಿ ಫಿಗ್ ಟ್ರೀಜ NASBಯ ಮೊದಲಿನ ಆವೃತ್ತಿಗಳಲ್ಲಿ ಅಡಿ ಟಿಪ್ಪಣಿಯಲ್ಲಿ ಹೇಳಲ್ಪಟ್ಟಿದೆ. [10]KJVಯಲ್ಲಿ "ಪಬ್ಲಿಕನ್" ಎಂದು ಇದೆ. ಇದು ಬಹಿರಂಗ ಸೇವೆಯಲ್ಲಿಯ ಮನುಷ್ಯನಿಗೆ ಸಂಬಂಧಿಸಿದೆ. ಹೀಗಿದ್ದರೂ ಜಗತ್ತಿನ ಕೆಲವು ಭಾಗಗಳಲ್ಲಿ ಪಬ್ಲಿಕನ್‌ನು ಪಬ್ಬನ್ನು - ಬೀರನ್ನು ಮಾರುವ ಸ್ಥಳವನ್ನು ನಡಿಸುವವನಾಗಿದ್ದಾನೆ.

[11]"ನೇಮಿಸಿದ ಹಾಸಲಿಗಿಂತ - ಹೆಚ್ಚಾಗಿ ಏನೂ ಎಳಕೊಳ್ಳಬೇಡಿರಿ" ಎಂದು (ಲೂಕ 3:13) ಸ್ನಾನಿಕನಾದ ಯೋಹಾನನು ಸುಂಕದವರಿಗೆ ಆಜ್ಞಾಪಿಸಿದನು. [12]ಟ್ಯಾಲ್ಮಡ್ ಎಂಬುದು ಧರ್ಮ ಶಾಸ್ತ್ರದ ಮೇಲಿನ ಯೆಹೂದಿ ವ್ಯಾಖ್ಯಾನ. [13]ಮತ್ತಾಯ 11:19; ಲೂಕ 7:34ಲನು ನೋಡಿರಿ. [14]"ಮಾಫಿಯಾ" ಹಾಗೂ "ಗಾಡ್ ಫಾದರ್" ಎಂಬ ಗ್ಯಾಂಗಸ್ಟರ್ ಪದಗಳು ಅಮೇರಿಕನ್ನರಿಗೆ ಹೆಚ್ಚಾಗಿ ಪರಿಚಯವುಳ್ಳವುಗಳಾಗಿವೆ. ಈ ವಿಚಾರವನ್ನು ಹೇಳಲು ಇತರ ಪದಗಳನ್ನು ಉಪ ಯೋಗಿಸಬಹುದು. [15]ಜಕ್ಕಾಯನ ಐಶ್ವರ್ಯವು ಸಂಪೂರ್ಣವಾಗಿ ಪ್ರಯಾಣಿಕ ವಿಧಾನಗಳಿಂದ ಬಂದಿರುವ ಸಾಧ್ಯತೆಯಿದೆ. ಹೀಗಿದ್ದರೂ ಪಠ್ಯದಲ್ಲಿಯ ಈ ಮಾತುಗಳ ಸ್ಥಾನವು ಮತ್ತು

ಹಿನ್ನೆಲೆಯು ಸುಂಕವಸೂಲಿ ಮಾಡುವವರು ಅಪ್ರಾಮಾಣಿಕರಾಗಿರುವರೆಂದು ಯೆಹೂದ್ಯರು ಯೋಚಿಸಿದ ರೀತಿಯಲ್ಲಿಯೇ ಜಕ್ಕಾಯನು ಇದ್ದಿರಬಹುದೆಂದು ನಾನು ನಂಬುತ್ತೇನೆ. [16]ಹೆಚ್ಚಾದ ವಯಸ್ಕರಿಗೆ ನೀವು ಬಾಲ್ಯದಲ್ಲಿದ್ದಾಗ ಬಿಡಲ್ಪಟ್ಟಿದ್ದೇವೆಂದು ಭಾವಿಸಿದ ಅನುಭವವಿರುತ್ತದೆ. ಅದರ ಬದುಲು ವೈಯಕ್ತಿಕ ಅನುಭವವನ್ನು ಹೇಳಬಹುದು. [17]ಇತ್ತೀಚಿಗಿನ ಆಸ್ತಿ ಹಾಳುಮಾಡಿದ ನೆರೆಹಾವಳಿ, ಚಂಡಮಾರುತ, ಬಿರುಗಾಳಿ, ಇತರ ನೈಸರ್ಗಿಕ ನಾಶನಗಳ ಪ್ರಮುಖ ಸುದ್ದಿಗಳನ್ನು ಹೇಳಬಹುದು. ನಾನು ವಾಸಿಸುತ್ತಿರುವ ಜಡ್ಸೋನಿಯಾ, ಕಾನ್ಸಾಸ 1952ರಲ್ಲಿ ಸುಂಟರ ಗಾಳಿಯಿಂದ ಸಂಪೂರ್ಣವಾಗಿ ನಾಶವಾಗಿ ಹೋಗಿತ್ತು. [18]KJVಯಲ್ಲಿ ಇಬ್ರಿಯ. 11:6 ನೋಡಿರಿ "ಹುಡುಕು" ಎಂಬುದಕ್ಕಾಗಿದ್ದ ಗ್ರೀಕ ಪದವು "ಪರಿಶ್ರಮದಿಂದ ಹುಡುಕು" ಎಂದು ಭಾಷಾಂತರಿಸಲ್ಪಟ್ಟಿದೆ. [19]ಯೇಸುವನ್ನು ನೋಡಲು ಪ್ರಯತ್ನಿಸಿ ಜನಸಮೂಹದೊಳಗೆ ಹೋಗಲು ತನ್ನ ಜೀವವನ್ನು ತನ್ನ ಕೈಗಳಲ್ಲಿ ಜಕ್ಕಾಯನು ಬಹುಶಃ ಹಿಡಿದು ಕೊಂಡಿದ್ದಿರಬೇಕು. ಆತನನ್ನು ನೋಡಲು ಯೇಸುವನ್ನು ನಿರ್ಧರಿಸಿಕೊಂಡಿದ್ದನು. [20]"ಜಕ್ಕಾಯನು ಚಿಕ್ಕ ಮನುಷ್ಯನಾಗಿದ್ದನು" ಎಂಬ ಪದಗಳುಳ್ಳ ಮಕ್ಕಳ ರಾಗವನ್ನು ಅಭಿನಯಿಸಿ ಹಾಡಬಹುದು.

[21]ಗಿಡ್ಡ ವ್ಯಕ್ತಿಗಳು ಆಗಲೇ ನಿಂತುಕೊಂಡಿದ್ದರೂ "ಎದ್ದು ನಿಲ್ಲು" ಎಂದು ಎಷ್ಟೋಸಲ ಹೇಳಲ್ಪಟ್ಟಿರುವದಿಲ್ಲವೋ? [22]ಹಿಂದೆ ಇದ್ದ ಒಬ್ಬ ನಟನು ಅಲಾನ್ ಲಾಡ್ ಹಾಗೂ ಇತ್ತೀಚಿಗೆ ಇರುವವರು ಡುಡ್ಲೆ ಮೂರ್, ಡಸ್ಟಿನ್ ಹೋಪ್‌ಮನ್, ಡ್ಯಾನ್ನಿ ಡೆವಿಟೊ ಹಾಗೆಯೇ ಚಿಕ್ಕ ನಟಿಯರು ಇರುವರು. [23]ಓಕ್ಲಾಹೋಮಾದ ಲೋನ ವುಲ್ಫದಲ್ಲಿ ನನ್ನ ತಂದೆಗಿಂದ ಮೊದಲು ಇದ್ದ ಶಿಕ್ಷಕ ಅರ್ಚಿ ಗ್ಯಾರಿಸನ್. [24]ನನ್ನ ಮೊಮ್ಮಗ ಸೇತ್ ನಮ್ಮನ್ನು ಸಂದರ್ಶಿಸುವಾಗ ಯಾವದೇ ಸಮಯದಲ್ಲಿ ನಾವು ಮರದ ಬಳಿಯಲ್ಲಿದ್ದರೆ, ಅವನು ಅದನ್ನು ಏರುತ್ತಾನೆ. [25]ಯೇಸುವು ಮನುಷ್ಯನಲ್ಲಿ ಏನಿತ್ತೆಂದು ತಿಳಿದಿದ್ದನೋ ಹಾಗೆಯೇ, ಆತನು ಜಕ್ಕಾಯನ ಹೆಸರನ್ನು ತಿಳಿದಿದ್ದನು ಎಂದು ನಾನು ಊಹಿಸುತ್ತೇನೆ (ಯೋಹಾನ 2:24, 25; ಲೂಕ 6:8; 11:17 ನೋಡಿರಿ). [26]ಅರಾಧನೆಯ ನಂತರ ನಿಮ್ಮ ಬಳಿಗೆ ನಡೆದು ಬಂದು, "ಮಧ್ಯಾಹ್ನದ ಊಟಕ್ಕೆ ನಿಮ್ಮೊಡನೆ ಮನೆಗೆ ಹೋಗುತ್ತೇನೆ ಎಂದು ಹೇಳಿದರೆ ಹೇಗೆ?" ಎಂದು ಪ್ರಸಂಗದಲ್ಲಿ ಹೇಳುತ್ತೇನೆ. [27]ಲೂಕನ ಸುವಾರ್ತೆಯಲ್ಲಿ "ಸಂತೋಷ" ಎಂಬುದು ಮುಖ್ಯ ಪ್ರಸ್ತಾಪಗಳಲ್ಲಿ ಒಂದಾಗಿದೆ. ಈ ಪದವು ಒಂದಿಲ್ಲಾ ಒಂದು ರೀತಿಯಲ್ಲಿ ಇಪ್ಪತ್ತು ಸಲ ಕಂಡು ಬರುತ್ತದೆ. [28]ಯೇಸುವಿನ ಶಿಷ್ಯರು ಜಕ್ಕಾಯನ ಮನೆಗೆ ಹೋದರೋ ಇಲ್ಲವೋ ಎಂಬುದನ್ನು ಹೇಳುವದಿಲ್ಲ. ಅವರು ಹೋದರೆಂದು ನಾನು ಊಹಿಸುತ್ತೇನೆ. [29]ಮತ್ತಾಯ 9:11; 11:19; ಮಾರ್ಕ 2:16; ಲೂಕ 5:30; 7:34. [30]ಇದು KJV ಹಾಗೂ NIVಯಲ್ಲಿ ಸೂಚಿಸಲ್ಪಟ್ಟಿದೆ.

[31]ಇದು KJV ಹಾಗೂ NIVಯಲ್ಲಿ ಸೂಚಿಸಲ್ಪಟ್ಟಿದೆ. [32]Jesus ಎಂಬ ಚಲನ ಚಿತ್ರವು ಜಕ್ಕಾಯನು ತನ್ನ ಮನೆಯ ಮುಂದಿನ ಬಾಗಿಲಿನ ಸುತ್ತ ಗುಂಪು ಕೂಡಿದ ಭಿಕ್ಷಕರಕಡೆಗೆ ನಾಣ್ಯಗಳನ್ನು ಎಸೆಯುವಾಗ ನಗುತ್ತಿರುವಂತೆ ತೋರಿಸುತ್ತದೆ. ಇದು ಹಾಗಿತ್ತೋ ಇಲ್ಲವೋ ಎಂಬುದನ್ನು ನಾವು ತಿಳಿಯಲಾರೆವು. ಆದರೆ ಜಕ್ಕಾಯನ ಜೀವನದಲ್ಲಿ ಸಂಭವಿಸುವುದರೊಂದಿಗೆ ಸರಿಯಾಗಿದೆ. [33]ಅರಣ್ಯಕಾಂಡ 5:7; ಯಾಜಕಕಾಂಡ 6:5. [34]ವಿಮೋಚನಕಾಂಡ 22:1, 4, 7. [35]ನಮ್ಮ ಮಾರ್ಪಡುವಿಕೆಯು ಜಕ್ಕಾಯನಷ್ಟು ಉದಾರತನವುಳ್ಳಬದ್ದಾಗಿರದಿದ್ದರೆ, ನಮ್ಮ ಮಾರ್ಪಡುವಿಕೆಯನ್ನು ನಾವು ಪ್ರಶ್ನಿಸಿಕೊಳ್ಳುವ ಅವಶ್ಯಕತೆಯಿದೆ. [36]ಗಲಾತ್ಯ. 3:29; ನೋಡಿರಿ. ರೋಮಾಪುರ 4:12; ಗಲಾತ್ಯ. 3:7. [37]ಸಂಪ್ರಾದಾಯದ ಪ್ರಕಾರ ಜಕ್ಕಾಯನು ಆ ಮಾರ್ಗದಲ್ಲಿ ಮುಂದುವರಿದನು. ಅವನು ಕೈಸರಿಯದಲ್ಲಿ ಬಿಷಪ್ (ಹಿರಿಯ) ಆದನು ಎಂದು ಅಲೆಕ್ಸಾಂಡ್ರಿಯದ ಕ್ಲೆಮೆಂಟ ಬರೆಯುತ್ತಾನೆ. [38]ಹೀಗೆ ಹೇಳಿದ್ದರ ಅರ್ಥ, "ಹೇಗೆ ಮುಂದುವರಿಯ ಬೇಕೆಂಬುದನ್ನು ತಿಳಿಯದೇ" ಎಂದಾಗುತ್ತದೆ. [39]"ಇಂದು ಇಲ್ಲಿ ಇರಬೇಕೋ ಇಲ್ಲವೇ ಇರಬಾರದೋ ಎಂಬುದರೊಂದಿಗೆ ನೀವು ಹೋರಾಡಿರಬಹುದು" ಎಂದು ಪ್ರಸಂಗದಲ್ಲಿ ಹೇಳುತ್ತೇನೆ.

© 2009 Truth for Today